4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಎಸ್‌ಸಿ ಕೇಸ್ ನಂಃ 210/2022
ಫ್ರಾಸಾಃ 1
ಆ ಸಾಃ 1

ಸಾಕ್ಷಿಯ ಹೆಸರುಃ ಮಹೇಶ ರುದ್ರಪ್ಪಾ ಮರೆದ

ತಂದೆಯ ಹೆಸರುಃ ರುದ್ರಪ್ಪಾ ಮರೆದ

ವಯಸ್ಸುಃ 24 ವರ್ಷ

ಉದ್ಯೋಗಃ ವ್ಯವಸಾಯ ಮತ್ತು ಸ್ಟಾಕ ಮಾರ್ಕೇಟನಲ್ಲಿ ಟ್ರೆಡಿಂಗ.

ವಾಸ್ತವ್ಯಃ ಬೆಳಗಾವಿ

ದಿನಾಂಕಃ 05-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಕಿತ್ತೂರು ತಾಲೂಕಿನ ಬೈಲೂರಿನಲ್ಲಿ ವಾಸ ಇದ್ದೇನೆ. ಚಾಸಾ 8 ಶ್ರೀಮತಿ. ಸೌಮ್ಯ ನನ್ನ ಅಕ್ಕ. ಚಾಸಾ 8 ಸಹ ಬೈಲೂರಿನಲ್ಲಿರುವ ನಮ್ಮ ಮನೆಯಲ್ಲೆ ವಾಸವಾಗಿದ್ದಾಳೆ. ನಾನು ದಿನಾಂಕ 15.06.2020 ರಿಂದು ಈ ಕೇಸಿನ ದೂರು ಕೊಟ್ಟಿರುತ್ತೇನೆ. ನಾನೇ ದೂರನ್ನು ಬರೆದು ಕಿತ್ತೂರ ಪೊಲೀಸ ಠಾಣೆಗೆ ಕೊಟ್ಟಿದ್ದು ನಾನು ಕೊಟ್ಟ ದೂರನ್ನು ಗುರುತಿಸಿದ್ದು ಸದರಿ ದೂರನ್ನು ನಿಪಿ 1 ಎಂದು ಗುರುತಿಸಲಾಯಿತು. ದೂರಿನಲ್ಲಿರುವ ನನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ದಿನಾಂಕ

19.02.2020 ರಂದು ನಾನು ಮತ್ತು ನನ್ನ ಅಕ್ಕ ಚಾಸಾ 8 ಸೌಮ್ಯ ಇವರು ಮೋಟರ ಸೈಕಲನಲ್ಲಿ ಎಂ.ಕೆ.ಹುಬ್ಬಳಿಯಿಂದ ಬೈಲೂರಿಗೆ ಹೋಗುತ್ತಿದ್ದೇವು. ನಾವು ರಾತ್ರಿ 10.30 ಗಂಟೆಗೆ ಕಿತ್ತೂರು ದಾಟಿ ಕಿತ್ತೂರು-ಬಿಡಿ-ಖಾನಾಪೂರ ರಸ್ತೆಯಲ್ಲಿ ಹೋಗುತ್ತಿರುವಾಗ ಹಿರೇಮಠ ಎನ್ನುವರ ಜಮೀನು ಹತ್ತಿರ 3 ಜನರು ಕೈ ಮಾಡಿ ಸನ್ನೇ ನೀಡಿ ನನ್ನ ವೋಟರ ಸೈಕಲನ್ನು ನಿಲ್ಲಿಸಿದ್ದರು. ನಾನು ಆಗ ಮೋಟರ ಸೈಕಲನ್ನು ನಿಧಾನ ಮಾಡಿ ಮೋಟರ ಸೈಕಲನ್ನು ನಿಲ್ಲಿಸಿ ಯಾಕೆ ನಿಲ್ಲಿಸಿದ್ದೀರಿ ಎಂದು ಕೇಳಿದ್ದೇನು. ಆ 3 ಜನರಲ್ಲಿ ಒಬ್ಬನು ನನ್ನ ಮೋಟರ ಸೈಕಲನ ಚಾವಿಯನ್ನು ತೆಗೆದನು. ಆಗ ಅಲ್ಲಿಗೆ ಇನ್ನು 3 ಜನ ಓಡಿ ನಮ್ಮ ಹಿಂದಿನಿಂದ ಬಂದರು. ಅಲ್ಲಿ ಇದ್ದ 6 ಜನರು ನನಗೆ ನಿಮ್ಮಲ್ಲಿದ್ದ ವಸ್ತುಗಳಾದ ಮೊಬೈಲ ಫೋನ, ಹಣ ಮತ್ತು ಬಂಗಾರ ಚೈನ ಕೊಡಿ ಎಂದು ಕೇಳಿದರು. ಆ ರೀತಿ ಅಲ್ಲಿ ಇದ್ದ 6 ಜನರು ನ್ಯಾಯಾಲಯದ ಮುಂದೆ ಇದ್ದ ಆರೋಪಿತರೇ ಇದ್ದು ಅವರನ್ನು ನಾನು ಗುರುತಿಸಿದ್ದೇನೆ. ಆರೋಪಿತರು ನನಗೆ ಮತ್ತು ನನ್ನ ಅಕ್ಕ ಚಾಸಾ 8 ರವರಿಗೆ ಹಣ, ಮೊಬೈಲ ಫೋನ ಮತ್ತು ಬಂಗಾರದ ಚೈನನ್ನು ಕೊಡು ಎಂದು ಹೇಳಿ ಒಬ್ಬ ಆರೋಪಿಯು ಅಂದರೆ 1 ನೇ ಆರೋಪಿ ಉಮೇಶ ಖಂಡೋಜಿ ನನ್ನ ಕಿಸೆಯಲ್ಲಿದ್ದ ಮೊಬೈಲ ಫೋನನನ್ನು ತೆಗೆದನು. 1 ನೇ ಆರೋಪಿಯು ನನ್ನ ಪ್ಯಾಂಟಿನ ಕಿಸೆಯಲ್ಲಿದ್ದ ಮೊಬೈಲ ಫೋನನ್ನು ತೆಗೆಯುವಾಗ 4 ಜನ ಆರೋಪಿತರು ನನ್ನನ್ನು ಗಟ್ಟಿಯಾಗಿ ಹಿಡಿದಿದ್ದರು. ನನ್ನ ಅಕ್ಕ ಸೌಮ್ಯಳ ಕೈಯಲ್ಲಿ ಮೊಬೈಲ ಫೋನನ್ನು ಆರೋಪಿತರು ಕಿತ್ತುಕೊಂಡರು. ನನ್ನನ್ನು 4 ಜನ ಆರೋಪಿತರು ಹಿಡಿದುಕೊಂಡಾಗ ಇನ್ನಿಬ್ಬರು ಆರೋಪಿತರು ನನ್ನ ಕೊರಳಲ್ಲಿರುವ 10 ಗ್ರಾಂ ತೂಕದ ಚಿನ್ನದ ಚೈನನ್ನು ಕಸಿದುಕೊಂಡರು.

ಆಗ ನಾನು ಮತ್ತು ನನ್ನ ಅಕ್ಕ ಚಿರಾಡಿದೇವು. ಆಗ ಬಿಡಿ ಕಡೆಯಿಂದ 2 ವಾಹನಗಳು ಬರುತ್ತಿದ್ದವು. ಆ ವಾಹನ ಬರುತ್ತಿರುವುದನ್ನು ನೋಡಿ ಆರೋಪಿತರು ನಮ್ಮನ್ನು ಬಿಟ್ಟು ನನ್ನಿಂದ ಕಿತ್ತುಕೊಂಡಿದ್ದ ಒಂದು ಮೊಬೈಲ ಫೋನ ಮತ್ತು ಒಂದು ಚಿನ್ನದ ಚೈನು ಮತ್ತು ನನ್ನ ಅಕ್ಕಳಿಂದ ಕಿತ್ತುಕೋಂಡಿದ್ದ ಒಂದು ಮೊಬೈಲ ಫೋನ ಹಿಡಿದುಕೊಂಡು ಓಡುತ್ತಾ ಹೋಗಿ ಅಲ್ಲಿ ಅವರು ನಿಲ್ಲಿಸಿದ್ದ ಎರಡು ಮೋಟರ ಸೈಕಲನಲ್ಲಿ ಕುಳಿತು ಅಲ್ಲಿಂದ ಕಿತ್ತೂರ ಕಡೆಗೆ ಮೋಟರ ಸೈಕಲನಲ್ಲಿ ಹೋದರು. ಆರೋಪಿತರು ಆ ರೀತಿ ಸ್ಥಳದಿಂದ ಓಡಿಡುತ್ತಿದ್ದಾಗ ಅಲ್ಲಿ ಬರುತ್ತಿದ್ದ 2 ಕಾರುಗಳನ್ನು ನಾವು ನಿಲ್ಲಿಸಲು ಸನ್ನೇ ನೀಡಿದರು ಅವರು ನಿಲ್ಲಿಸಲಿಲ್ಲ. ಆರೋಪಿತರು 20 ರಿಂದ 30 ವರ್ಷ ಪ್ರಾಯದವರಾಗಿದ್ದರಿಂದ ಮತ್ತು ಅವರು ಅಲ್ಲಿ ಕನ್ನಡವನ್ನು ಮಾತನಾಡುತಿದ್ದರಿಂದ ನಾನು ಈ ಬಗ್ಗೆ ನನ್ನ ದೂರಿನಲ್ಲಿ ನಮೂದಿಸಿರುತ್ತೇನೆ. ಆರೋಪಿತರು ನಿಲ್ಲಿಸಿದ ಮೋಟರ ಸೈಕಲಗಳು ಸ್ವಲ್ಪದೂರದಲ್ಲಿ ನಿಲ್ಲಿಸಿದ್ದರಿಂದ ಆ ಮೋಟರ ಸೈಕಲಗಳ ನಂಬರಗಳು ಕಾಣಿಸಲಿಲ್ಲ. ಆರೋಪಿತ ಒಬ್ಬನ್ನು ನನ್ನ ಮೋಟರ ಸೈಕಲ ಕೀಯನ್ನು ಕಿತ್ತುಕೊಂಡಿದ್ದು ಅಲ್ಲೇ ಎಸೆದು ಹೋಗಿದ್ದನು. ಆ ಕಾರಣ ಈ ಘಟನೆಯಾದ ನಂತರ ನಾನು ಮತ್ತು ನನ್ನ ಅಕ್ಕ ನನ್ನ ಮೋಟರ ಸೈಕಲನಲ್ಲಿ ನಮ್ಮ ಮನೆಗೆ ಬೈಲೂರಿಗೆ ಬಂದೇವು. ಮನೆಗೆ ಬಂದು ನನ್ನ ತಾಯಿಗೆ ಈ ಘಟನೆ ಬಗ್ಗೆ ತಿಳಿಸಿದೆನು. ಆಗ ನನ್ನ ತಾಯಿ ನೋಡುವ ಈಗ ದೂರು ಕೊಡುವುದು ಬೇಡ ಎಂದು ಹೇಳಿದಳು. ನಾನು ಪ್ರತಿದಿನವೂ ಈ ಘಟನೆಯಾದ ದಾರಿಯಲ್ಲೇ ಓಡಾಡುವುದರಿಂದ ನನ್ನ ತಾಯಿ ದೂರು ಕೊಡುವುದು ಬೇಡ ಎಂದು ಹೇಳಿದ ಕಾರಣ ನಾನು ದೂರು ಕೊಡಲು

ಸುಮ್ಮನಾದೇನು. ಇದಾದ ಸುಮಾರು 3 ತಿಂಗಳಲ್ಲಿ ನನ್ನ ಮೊಬೈಲ ಕಸೆದುಕೊಂಡವರು ಸಿಕ್ಕಿದಾರೆ ಅವರನ್ನು ಕಿತ್ತೂರು ಪೊಲೀಸ ಠಾಣೆಯಲ್ಲಿ ಕರೆದುಕೊಂಡು ಬಂದಾರೆ ಎಂದು ನನಗೆ ಗೋತ್ತಾಯಿತು. ಆ ಕಾರಣ ನಾನು 15.06.2020 ರಂದು ಕಿತ್ತೂರು ಪೊಲೀಸ ಠಾಣೆಗೆ ಹೋದೆನು. ಆಗ 3 ಜನ ಆರೋಪಿತರು ಪೊಲೀಸ ಠಾಣೆಯಲ್ಲಿ ಇದ್ದರು. 1 ನೇ ಆರೋಪಿ ಖಂಡೋಜಿ, 2 ನೇ ಆರೋಪಿ ಮಾಳಗಿ ಮತ್ತು ಇನ್ನೊಬ್ಬ ಆರೋಪಿ ಪೊಲೀಸ ಠಾಣೆಯಲ್ಲಿದ್ದರು ಆತನ ಹೆಸರು ನನಗೆ ಹೇಳಲಾಗುವುದಿಲ್ಲ. ಆರೋಪಿತರೇ ನನ್ನ ಮೊಬೈಲ ಫೋನ ಮತ್ತು ಚಿನ್ನದ ಚೈನನ್ನು ಮತ್ತು ನನ್ನ ಅಕ್ಕಳ ಮೊಬೈಲ ಫೋನನ್ನು ಕಿತ್ತುಕೊಂಡಿದ್ದರು ಎಂದು ನಾನು 3 ಜನರು ಆರೋಪಿತರನ್ನು ಗುರುತಿಸಿದೆನು. ನಾನು ದೂರು ಕೊಟ್ಟ ನಂತರ ದಿನಾಂಕ 22.06.2020 ಹಿಂಡಲಗಾ ಜೈಲನಲ್ಲಿ ಆರೋಪಿತರನ್ನು ಗುರುತಿಸಲು ನನ್ನ ಕರೆಸಿದ ಮೇರೆಗೆ ನಾನು ಹಿಂಡಲಗಾ ಜೈಲಿಗೆ ಹೋದೆನು ಆಗ ಅಲ್ಲಿ ಕಿತ್ತೂರು ತಹಸೀಲ್ದಾರ ಮತ್ತು ಚಿಕ್ಕೋಡಿ ತಹಸೀಲ್ದಾರವರು ಇದ್ದರು. ನಾನು ಮತ್ತು ನನ್ನ ಅಕ್ಕ ಚಾಸಾ 8 ಹಿಂಡಲಗಾ ಜೈಲಿಗೆ ಆರೋಪಿತರನು ಗುರುತಿಸಲು ಹೋದೆವು. ಅಲ್ಲಿ 3 ಸುತ್ತಿನಲ್ಲಿ ತಹಸೀಲ್ದಾರವರು ಗುರುತಿನ ಕವಾಯತು ನಡೆಸಿದ್ದು ಆರೋಪಿತರ ಜೊತೆ ಇತರ ಕೈದಿಗಳನ್ನು ನಿಲ್ಲಿಸಿ ಗುರುತಿನ ಕವಾಯತು ನಡೆಸಿದರು ಆಗ ನಾನು 1 ನೇ ಆರೋಪಿ ಖಂಡೋಜಿ, 2 ನೇ ಆರೋಪಿ ಮಾಳಗಿ ಮತ್ತು ಇನ್ನೊಬ್ಬ ಆರೋಪಿಯನ್ನು ಗುರುತಿಸಿದ್ದೇನು ಆ ಇನ್ನೊಬ್ಬ ಆರೋಪಿಯ ಹೆಸರು ನನಗೆ ನೆನಪಿಲ್ಲ. ಆದರೆ ನ್ಯಾಯಾಲಯದ ಮುಂದೆ ಇದ್ದ 3 ನೇ ಆರೋಪಿಯನ್ನು ಸಾಕ್ಷಿ ತೊರಿಸಿ ಈತನನ್ನೇ ನಾನು ಅಲ್ಲಿ ಹಿಂಡಲಗಾ ಜೈಲಿನಲ್ಲಿ

ಗುರುತಿಸಿದ್ದೇನೆಂದು ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ 1 ರಿಂದ 3 ನೇ ಆರೋಪಿತರನ್ನು ಗುರುತಿಸಿ ಅವರನ್ನೇ ನಾನು ಹಿಂಡಲಗಾ ಜೈಲಿನಲ್ಲಿ ಗುರುತಿನ ಕವಾಯತ ವೇಳೆಯಲ್ಲಿ ಗುರುತಿಸಿದ್ದೆನು ಎನ್ನುತ್ತಾರೆ. ಗುರುತಿನ ಕವಾಯತಿಗೆ ಬರಲೆಂದು ತಹಸೀಲ್ದಾರವರು ನೀಡಿದ ನೋಟಿಸಿನ ಪ್ರತಿ ಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ನಾನು 1 ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಕವಾಯತಿನ ಪ್ರಮಾಣ ಪತ್ರದಲ್ಲಿರುವ ನನ್ನ ಸಹಿಯನ್ನು ಗುರುತಿಸಿದ್ದು ಆ ದಾಖಲೆಯನ್ನು ನಿಪಿ 3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಪ್ರಮಾಣ ಪತ್ರದಲ್ಲಿರುವ ನನ್ನ ಸಹಿ ಯನ್ನು ಗುರುತಿಸಿದ್ದು ಆ ದಾಖಲೆಯನ್ನು ನಿಪಿ 4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. 3 ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಪ್ರಮಾಣ ಪತ್ರದಲ್ಲಿರುವ ನನ್ನ ಸಹಿಯನ್ನು ಗುರುತಿಸಿದ್ದು ಆ ದಾಖಲೆಯನ್ನು ನಿಪಿ 5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ನಾನು ಗುರುತು ಕವಾಯತಿನ ಸಮಯ ಕೊಟ್ಟ ಮಾದರಿ ಸಹಿಯನ್ನು ಗುರುತಿಸಿದ್ದು ಆ ದಾಖಲೆಯನ್ನು ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಕಿತ್ತೂರು ಪೊಲೀಸ ಠಾಣೆಗೆ ಕರೆದು 4 ನೇ ಆರೋಪಿತರ ಬಜಾಜ ಮೋಟರ ಸೈಕಲನ್ನು ಜಪ್ತು ಮಾಡಿ ಪಂಚನಾಮೆ ಮಾಡಿರುತ್ತಾರೆ. ಆದರೆ ಪಂಚನಾಮೆ ಕಾಲಕ್ಕೆ ನಾನು ಅಲ್ಲಿ ಇರಲಿಲ್ಲ. 4 ನೇ ಆರೋಪಿಯೂ ಸಹ ಮೊಟರ ಸೈಕಲ ಜಪ್ತು ಮಾಡುವಾಗ ಅಲ್ಲಿ ಇರಲಿಲ್ಲ. ನನಗೆ ಪೊಲೀಸರು 4 ನೇ

ಆರೋಪಿ ಲಕ್ಷ್ಮಣ ನಡಕಟ್ಟಿ ಈತನ ಮೋಟರ ಸೈಕಲ ಎಂದು ಒಂದು ಬಜಾಜ ಕಂಪನಿಯ ಮೋಟರ ಸೈಕಲನ್ನು ತೋರಿಸಿದರು. ಆ ರೀತಿ ಮೋಟರ ಸೈಕಲನ್ನು ನನಗೆ ತೋರಿಸಿದಾಗ ನಾನು ಆ ಮೊಟರ ಸೈಕಲನ್ನು ನಮ್ಮನ್ನು ದರೋಡೆ ಮಾಡಿದ ಸ್ಥಳಕ್ಕೆ ತಂದ ಬಗ್ಗೆ ಹೇಳಿ ಆ ಮೋಟರ ಸೈಕಲನ್ನು ಗುರುತಿಸಿದೆನು. ನನಗೆ ಕಿತ್ತೂ ಪೊಲೀಸರು ನನಗೆ ಹಿಂಡಲಗಾ ಜೈಲಿಗೆ ಹೋಗಿ ಆರೋಪಿತರನ್ನು ಗುರುತಿಸಲು ಹೇಳಿದಾಗ ನಾನು ಮತ್ತು ನನ್ನ ಅಕ್ಕ ಚಾಸಾ 8 ರವರು ಹಿಂಡಲಗಾ ಜೈಲಿಗೆ ಹೋಗಿದ್ದೇವು. ಅಲ್ಲಿ ತಹಸಿಲ್ದಾರವರು ಗುರುತಿನ ಕವಾಯತು ನಡೆಸಿದ್ದು ಅಲ್ಲಿ ಇತರ 5-6 ಕೈದಿಗಳೊಂದಿಗೆ ನಿಲ್ಲಿಸಿದ 4 ನೇ ಆರೋಪಿ ಲಕ್ಮಣ ನಡಕಟ್ಟಿ ಇವರನ್ನು ನಾನು ಮತ್ತು ನನ್ನ ಅಕ್ಕ ಇಬ್ಬರು ಗುರುತಿಸಿದ್ದೇವು. ಗುರುತಿನ ಕವಾಯತಿನ ಬಗ್ಗೆ ಕೊಟ್ಟ ನೋಟಿಸನ್ನು ಗುರುತಿಸಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು. ಅಲ್ಲಿ 4 ನೇ ಆರೋಪಿಯ ಗುರುತಿನ ಕವಾಯತಿನ ಸಮಯದಲ್ಲಿ ಹಾಕಿದ ಸಹಿಯನ್ನು ಗುರುತಿಸಿದ್ದು ಆ ದಾಖಲೆಯನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ನನ್ನ ಮತ್ತು ನನ್ನ ಅಕ್ಕ ಚಾಸಾ 8 ರವರ ಮೊಬೈಲ ಫೋನಗಳನ್ನು ಮತ್ತು ನನ್ನ ಚಿನ್ನದ ಚೈನನ್ನು ಕಿತ್ತೂರ ಪೊಲೀಸರು ಆರೋಪಿತರಿಂದ ಜಪ್ತು ಮಾಡಿದ್ದು, ನಾನು ಜೆಎಂಎಫಸಿ ನ್ಯಾಯಾಲಯಕ್ಕೆ ಅರ್ಜಿ ಹಾಕಿ, ನ್ಯಾಯಾಲಯದ ಆದೇಶದ ಪ್ರಕಾರ ಕಿತ್ತೂರು ಪೊಲೀಸ ಠಾಣೆಯಿಂದ ಬಿಡಿಸಿಕೊಂಡಿರುತ್ತೇವೆ. ಆ 2 ಮೊಬೈಲ ಮತ್ತು ಚಿನ್ನದ ಚೈನ ನನ್ನ ಬಳಿ ಇರುತ್ತದೆ. ನಾನು ಪೊಲೀಸ ಠಾಣೆಯಲ್ಲಿ ನನ್ನ ಚಿನ್ನದ ಚೈನು, 2 ಮೊಬೈಲಗಳನ್ನು ನ್ಯಾಯಾಲಯದ ಅದೇಶದ ಪ್ರಕಾರ ತೆಗೆದ ಎರಡು

ಫೊಟೊಗಳನ್ನು ಗುರುತಿಸಿದ್ದು ಸದರಿ ಫೊಟೋಗಳನ್ನು ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು. ನಾನು 2 ಮೊಬೈಲ ಫೋನಗಳನ್ನು ಮತ್ತು ಚಿನ್ನದ ಚೈನು ಬಿಡಿಸಿಕೊಂಡಾಗ ಆ ವಸ್ತುಗಳ ಪೊಲೀಸ ಠಾಣೆಯಲ್ಲಿ ತೆಗೆದ ಫೊಟೋಗಳನ್ನು ಗುರುತಿಸುತಿದ್ದು ಆ ಫೋಟೋಗಳನ್ನು ನಿಪಿ 11 ಮತ್ತು 12 ಎಂದು ಗುರುತಿಸಲಾಯಿತು. ನಾನು ದೂರ ಕೊಟ್ಟ ದಿನವೇ ದಿನಾಂಕ 15.06.2020 ರಂದು ಪೊಲೀಸರು ಘಟನಾ ಸ್ಥಳಕ್ಕೆ ಅಂದರೆ ಆರೋಪಿತರು ನನ್ನನ್ನು ಮತ್ತು ನನ್ನ ಅಕ್ಕಳನ್ನು ದರೋಡೆ ಮಾಡಿದ ಹಿರೇಮಠ ರವರ ಮನೆ ಮತ್ತು ಜಮೀನು ಇರುವ ಸ್ಥಳವಾದ ಬಿಡಿ-ಖಾನಾಪೂರ ಅಥವಾ ಕಿತ್ತೂರು ರಸ್ತೆಗೆ ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದು ಆ ಸ್ಥಳ ನಾನುತೋರಿಸಿದ ಮೇರೆಗೆ ಅಲ್ಲಿ ಪಂಚನಾಮೆ ಮಾಡಿದರು. ಆ ಪಂಚನಾಮೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ 13 ಎಂದು ಗುರುತಿಸಲಾಯಿತು. ನಿಪಿ13(ಎ) ನನ್ನ ಸಹಿ. ಅಲ್ಲಿ ಫೊಟೋ ತೆಗೆಯಲಾಯಿತು. ಆ 2 ಫೊಟೋಗಳನ್ನು ಗುರುತಿಸಿದ್ದೇನೆ. ಸದರಿ ಫೊಟೋಗಳನ್ನು ನಿಪಿ 14 ಮತ್ತು 15 ಎಂದು ಗುರುತಿಸಲಾಯಿತು. ಅಲ್ಲಿ ಕೃತ್ಯ ನಡೆದ ಸ್ಥಳದ ನಕಾಶೆ ತೆಯಾರಿಸಲಾಗಿದ್ದು ಆ ನಕಾಶೆಗೆ ಸಹಿ ಹಾಕಿರುತ್ತೇನೆ. ಅದನ್ನು ಗುರುತಿಸಿದ್ದೇನೆ. ನಕಾಶೆಯನ್ನು ನಿಪಿ 16 ಎಂದು ಸಾಕ್ಷಿಯ ಸಹಿಯನ್ನು ನಿಪಿ16(ಎ) ಎಂದು ಗುರುತಿಸಲಾಯಿತು. 6ನೇ ಆರೋಪಿ ಪಿರಾಸಾಬಾ ಮುಲ್ಲಾನನ್ನು ಪೊಲೀಸ ಠಾಣೆಯಲ್ಲಿದ್ದ ಈ ಆರೋಪಿಯನ್ನು ಪೊಲೀಸರು ನನಗೆ ತೋರಿಸಿದ್ದು ಆತನನ್ನು ನಾನು ಗುರುತಿಸಿ ಆತನ ಬಗ್ಗೆ ದರೋಡೆ ಮಾಡಿದ ಬಗ್ಗೆ ಹೇಳಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ಪರ ಮಾನ್ಯ ವಕೀಲರು ವೇಳೆ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4 ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**

ದಿನಾಂಕಃ **16-06-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಈ ಘಟನೆಯು ದಿನಾಂಕ 19.02.2020 ರಂದು ಆಯಿತು. ನಾನು ಈ ಕೇಸಿನ ದೂರನ್ನು 15.06.2020 ರಂದು ಕೊಟ್ಟೆನು. ಈ ಘಟನೆ ಆದ ಸುಮಾರು 4 ತಿಂಗಳಲ್ಲಿ ಪೊಲೀಸರಿಗೆ ದೂರು ಕೊಟ್ಟೆನು. ಘಟನೆ ಆಯಿತು ಎಂದು ಹೇಳುವ ಸ್ಥಳದಿಂದ ಕಿತ್ತೂರು ಪೊಲೀಸ ಠಾಣೆಗೆ ಹೋಗಲು 2 ನಿಮಿಷ ಎಂದರೆ ಸಾಕ್ಷಿಯು 20 ನಿಮಿಷ ಆಗಬಹುದು ಎನ್ನುತ್ತಾರೆ. ಈ ಘಟನೆ ಆದ ಸ್ಥಳಕ್ಕೆ ಕಿತ್ತೂರ ಪೊಲೀಸ ಠಾಣೆಯಿಂದ ಎರಡುವರೆ ಕಿ.ಮೀ ದೂರವಾಗುತ್ತದೆ. ದ್ವಿಚಕ್ರವಾಹದಲ್ಲಿ ಘಟನೆ ಆಯಿತು ಎಂದು ಹೇಳುವ ಸ್ದಳದಿಂದ ಕಿತ್ತೂರು ಪೊಲೀಸ ಠಾಣೆಗೆ ಹೊಗಲು 3 ರಿಂದ 4 ನಿಮಿಷ ಸಾಕು ಎಂದರೆ ನಿಜ. ಈ ಘಟನೆ ಆದ ನಂತರ ನನ್ನ ಮೋಟರ ಸೈಕಲ ನನ್ನ ಬಳಿಯೇ ಇತ್ತು. ಈ ಘಟನೆ ಆದ ನಂತರ ತಕ್ಷಣ ಕಿತ್ತೂರ ಪೊಲೀಸ ಠಾಣೆಗೆ ಹೋಗಿ ದೂರು ಕೊಡಲು ನಿಮಗೆ ಅಡಚಣೆ ಇತ್ತಾ ಎಂದರೆ ಸಾಕ್ಷಿಯು ಅಡಚಣೆ ಇತ್ತು ಎನ್ನುತ್ತಾರೆ. ಏನು ಅಡಚಣೆ ಇತ್ತು ಎಂದರೆ ಸಾಕ್ಷಿಯು ಆರೋಪಿತರು ದರೋಡೆ ಮಾಡಿ ಕಿತ್ತೂರ ಕಡೆಗೆ ಹೋಗಿದ್ದರು ಆ ಕಾರಣ ನಾನು ಪುನಃ ಕಿತ್ತೂರ ಪೊಲೀಸ ಠಾಣೆ ಕಡೆಗೆ ಹೋಗಲು ಹೆದರಿಕೆ ಆಯಿತು ಎನ್ನುತ್ತಾರೆ. ನನಗೆ ಮಾರನೆದಿನ ಹೋಗಿ ಪೊಲೀಸರಿಗೆ ದೂರು ಕೊಡಬಹುದಾಗಿತ್ತು ಎಂದರೆ ನಿಜ. ನಾನು ಮಾರನೆದಿನ ದೂರು ಕೊಟ್ಟಿಲ್ಲ ಎಂದರೆ ನಿಜ. ಮಲ್ಲಿಕಾರ್ಜುನ

ಹಿರೇಮಠ ಇವರ ಜಮೀನ ಬಳಿ ಬರಬೇಕಾದರೆ ಬಿಡಿ ಕ್ರಾಸ ಮತ್ತು ಸೈನಿಕ ಸ್ಕೂಲ ದಾಟಿ ಬರಬೇಕೆಂದರೆ ನಿಜ. ಸೈನಿಕ ಸ್ಕೂಲ ದಾಟಿದ ನಂತರ ರಸ್ತೆ ಯುಟರ್ನ ಇದೆ ಎಂದರೆ ನಿಜ. ಸೈನಿಕ ಸ್ಕೂಲ ದಾಟಿದ ನಂತರ ಬಿಡಿವರೆಗೂ ರಸ್ತೆಯ ಇಕ್ಕಲೆಗಳಲ್ಲಿ ಮರಗಳು ಇವೆ ಎಂದರೆ ನಿಜ. ಅದು ಜಂಗಲ ಏರಿಯಾ ಎಂದರೆ ನಿಜ. ಅಲ್ಲಿ ಸಾಕಷ್ಟು ಮರಗಳು ಇರುವುದರಿಂದ ಸಾಯಂಕಾಲ 7.00 ಗಂಟೆ ನಂತರ ಕತ್ತಲು ಇರುತ್ತದೆ ಎಂದರೆ ನಿಜ. ಈ ಘಟನೆ ಆದ ಸ್ಥಳದ ಸುತ್ತಮುತ್ತ ಯಾವುದು ಲೈಟುಗಳು ಇರಲಿಲ್ಲ. ಈ ಘಟನೆಯ ಸಮಯದಲ್ಲಿ ರಾತ್ರಿ 10.30 ಕ್ಕೆ ಸಂಪೂರ್ಣ ಕತ್ತಲು ಇತ್ತು. ರಾತ್ರಿ 10.30 ಗಂಟೆ ಸಮಯದಲ್ಲಿ ಮಲ್ಲಿಕಾರ್ಜುನ ಹಿರೇಮಠ ಇವರ ಜಮೀನಿನ ಹತ್ತಿರ ಇರುವ ರಸ್ತೆಯಲ್ಲಿ ಯಾವುದೇ ವಾಹನಗಳು ಓಡಾಡುವುದಿಲ್ಲ ಎಂದರೆ ನಿಜ. ಈ ಘಟನೆ ಸಮಯದಲ್ಲಿ ಕತ್ತಲು ಇದುದ್ದರಿಂದ ಯಾರು ಬಂದರು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ.

ಅಲ್ಲಿದ್ದ ಸ್ಥಳ ಮಲ್ಲಿಕಾರ್ಜುನ ಹಿರೇಮಠ ರವರ ಜಮೀನು ಎಂದು ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿಯು ನಾನು ಅದೇ ರಸ್ತೆಯಲ್ಲಿ ಓಡಾಡುವುದರಿಂದ ನನಗೆ ಗೊತ್ತು ಎನ್ನುತ್ತಾರೆ. ಮಲ್ಲಿಕಾರ್ಜುನ ಹಿರೇಮಠ ರವರ ಜಮೀನ ಆಜುಬಾಜುನಲ್ಲಿ ಯಾರ ಜಮೀನು ಇರುತ್ತದೆ ಎಂದು ನನಗೆ ಗೋತ್ತಿರುವುದಿಲ್ಲ. ಮಲ್ಲಿಕಾರ್ಜುನ ಹಿರೇಮಠ ರವರ ಜಮೀನಿನ ರಸ್ತೆಯ ಇನ್ನೊಂದು ಬದಿಯಲ್ಲಿ ಯಾರ ಜಮೀನು ಇದೆ ಎಂದು ನನಗೆ ಹೇಳಲಾಗುವುದಿಲ್ಲ. ಮಲ್ಲಿಕಾರ್ಜುನ ಹಿರೇಮಠ ರವರ ಜಮೀನಿನ ಸ್ವಲ್ಪ ಮೇಲೆ ಅವರ ಮನೆ ಇದೆ ಎಂದರೆ ನಿಜ. ಈ ಘಟನೆ ಆದ ತಕ್ಷಣ ನಾನು

ಮಲ್ಲಿಕಾರ್ಜುನ ಹಿರೇಮಠ ರವರ ಮನೆಗೆ ಹೊಗಿ ಈ ಘಟನೆಯ ಬಗ್ಗೆ ಅವರಿಗೆ ಹೇಳಲು ಪ್ರಯತ್ನ ಮಾಡಿಲ್ಲ. ಮಲ್ಲಿಕಾರ್ಜುನ ಹಿರೇಮಠ ರವರ ಹೇಳಿಕೆಯನ್ನು ಪೊಲೀಸರು ಪಡದಿದ್ದಾರೋ ಇಲ್ಲವ್ರೋ ಎಂದು ನನಗೆ ಗೊತ್ತಿಲ್ಲ. ಅವರ ಜಮೀನಿನ ಉತಾರವನ್ನು ಪೊಲೀಸರು ಪಡದಿದ್ದಾರೋ ಇಲ್ಲವ್ರೋ ಎಂದು ನನಗೆ ಗೊತ್ತಿಲ್ಲ. ಮಲ್ಲಿಕಾರ್ಜುನ ಹಿರೇಮಠ ರವರ ಜಮೀನಿನ ಮುಂದೆ ರಸ್ತೆಯಲ್ಲಿ ಹೋದಾಗ ಅಲ್ಲಿ ಒಂದು ಕೆಂಪು ಹಂಚಿನ ಮನೆ ಇದೆ ಎಂದರೆ ನಿಜ. ಸಾಕ್ಷಿಯು ಅಲ್ಲಿ 4-5 ಮನೆಗಳು ಇವೆ ಎಂದು ಹೇಳುತ್ತಾರೆ.ಆ 4-5 ಮನೆಯವರಿಗೆ ನಾನು ಈ ಘಟನೆಯ ಬಗ್ಗೆ ಹೇಳಲು ಪ್ರಯತ್ನ ಮಾಡಿಲ್ಲ. ನಾನು ಮತ್ತು ಚಾಸಾ 8 ಎಂ.ಕೆ.ಹುಬ್ಬಳ್ಳಿಯಿಂದ ನುಮ್ಮ ಮನೆ ಕಡೆಗೆ ಹೋಗುತ್ತಿದ್ದಾಗ ಮೊಟರ ಸೈಕಲನ್ನು ಗಂಟೆಗೆ 40 ರಿಂದ 45 ಕಿ.ಮೀ ವೇಗದಿಂದ ಓಡಿಸಿಕೊಂಡು ಹೋಗುತ್ತಿದ್ದೆನು. 40 ರಿಂದ 45 ಕಿ.ಮೀ ವೇಗದಲ್ಲಿ ಮೋಟರ ಸೈಕಲನಲ್ಲಿ ಹೋಗುತ್ತಿರುವಾಗ ಯಾರಾದರು ಸಡನ್ ಆಗಿ ಕೈ ಮಾಡಿದರೆ ಸಡ್ಡನ್ ಮೊಟರ ಸೈಕಲನಿಲ್ಲಿಸಲು ಆಗುವುದಿಲ್ಲ ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿ ರಸ್ತೆಯು ಸ್ವಲ್ಪ ಏರು ಮುಖವಾಗಿದ್ದರಿಂದ ನಾನು ಮೊಟರ ಸೈಕಲನ್ನು ನಿಧಾನವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದೆ ಎನ್ನುತ್ತಾರೆ. ಮಲ್ಲಿಕಾರ್ಜುನ ಹಿರೇಮಠ ಇವರ ಜಮೀನಿನ ಹತ್ತಿರ ರಸ್ತೆ ಏರು ಮುಖವಾಗಿರಲಿಲ್ಲ ಎಂದರೆ ಸರಿಯಲ್ಲ. ನಿಮಗೆ ಅಪರಿಚಿತರು ಕೈ ಸನ್ನೆ ಮಾಡಿದಾಗ ಮೊಟರ ಸೈಕಲ ನಿಲ್ಲಿಸುವುದು ಬೇಡ ಎಂದು ತೋಚಿಲ್ಲವೆಂದರೆ ಸಾಕ್ಷಿಯು ನಾನು ಮೊಟರ ಸೈಕಲನ್ನು ನಿಧಾವಾಗಿ ಚಲಾಯಿಸಿಕೊಂಡು ಹೋಗುತ್ತಿದುದ್ದರಿಂದ ನಿಲ್ಲಿಸಿದ್ದೆನ್ನುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ವೇಳೆ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.

ದಿನಾಂಕಃ 24-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ರಾತ್ರಿಯಾಗಿದ್ದರಿಂದ ಯಾರಾದರೂ ಕೈ ಮಾಡಿದರೆ ನಿಲ್ಲುವುದು ಬೇಡ ಎಂದು ಹೇಳಿ ನೀವು ಅಲ್ಲಿಂದ ವೇಗವಾಗಿ ಹೋಗಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎನ್ನುತ್ತಾರೆ. ಆರೋಪಿತರು ನನ್ನ ಮೋಟರ ಸೈಕಲನ್ನು ಕೈ ಸನ್ನೇ ಮಾಡಿ ನಿಲ್ಲಿಸಿದಾಗ ಆರೋಪಿತರ ಕೈಗಳಲ್ಲಿ ಮಾರಕಾಸ್ತ್ರಗಳು ಇರಲಿಲ್ಲ. ಆರೋಪತರು ನನ್ನ ಮೋಟರ ಸೈಕಲನ್ನು ಕೈ ಸನ್ನೆ ಮಾಡಿ ನಿಲ್ಲಿಸಿದಾಗ ಆರೊಪಿತರ ಕೈಗಳಲ್ಲಿ ಖಾರದ ಪುಡಿ ಆಗಲೀ ಬೇರೆ ದ್ರವ ಪದಾರ್ಥಗಳಾಲೀ ಇರಲಿಲ್ಲ. ಆರೊಪಿತರು ಆ ದಿನ ಮಾಸ್ಕ ಧರಿಸಿರಲಿಲ್ಲ. ಆರೋಪಿತರು ನನ್ನ ಮೋಟರ ಸೈಕಲನ್ನು ತೆಗೆದುಕೊಂಡು ಹೋಗಿರಲಿಲ್ಲ. ಆ ದಿನ ನನ್ನ ಬಳಿ 40 ರಿಂದ 50 ರೂಪಾಯಿ ಹಣ ಇತ್ತು . ನನ್ನ ಅಕ್ಕನ ಬಳಿ ಹಣ ಇರಲಿಲ್ಲ. ಈ ಘಟನೆಯು 7 ರಿಂದ 8 ನಿಮಿಷ ಆಗಿತ್ತು. ಆರೋಪಿತರೆಲ್ಲರೂ ಆ ದಿನ ಯಾವ ಬಣ್ಣದ ಶರ್ಟುಗಳನ್ನು ಧರಿಸಿದ್ದರು ಮತ್ತು ಯಾವ ಬಣ್ಣದ ಪ್ಯಾಂಟಗಳನ್ನು ಧರಿಸಿದ್ದರು ನನಗೆ ಹೇಳಲಾಗುವುದಿಲ್ಲ. ಆರೋಪಿತರು ನನ್ನನು ತಡೆದು ನಿಲ್ಲಿಸಿದಾಗ ಕನ್ನಡದಲ್ಲಿ ಮಾತನಾಡುತ್ತಿದ್ದರು ಆದರೆ ಕನ್ನಡದಲ್ಲಿ ಏನು ಮಾತನಾಡುತ್ತಿದ್ದರು ನನಗೆ ಹೇಳಲಾಗುವುದಿಲ್ಲ. ಆರೋಪಿತರು ನನಗೆ ಹೊಡೆಬಡಿ ಮಾಡಿರಲಿಲ್ಲ ಅದರೆ ಜಾಗ್ಯಾಡಿದ್ದರು. ಆರೋಪಿತರು ನನನ್ನು ಜಾಗ್ಯಾಡಿದಾಗ ನನ್ನ ಶರ್ಟು ಹರಿದಿತ್ತು. ಆ ಶರ್ಟನ್ನು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಆರೋಪಿತರು ನನ್ನನ್ನು

ಜಗ್ಯಾಡಿದ ವಿಚಾರವನ್ನು ನನ್ನ ದೂರಿನಲ್ಲಾಗಲೀ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿಲ್ಲ ಎಂದರೆ ನಿಜ. ಆ ದಿನ ಕತ್ತಲು ಆಗಿದ್ದರಿಂದ ಆರೋಪಿತರಲ್ಲಿ ಯಾರು ನನ್ನನು ಹಿಡಿದರು ಮತ್ತು ಯಾರು ಚೈನನ್ನು ಕಿತ್ತರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಪೈಕಿ ಯಾರು ನನ್ನನ್ನು ಹಿಡಿದುಕೊಂಡಿದ್ದು ಮತ್ತು ಯಾರು ಚೈನು ಕಿತ್ತಿದ್ದು ಎಂದು ನನ್ನ ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ನಿಜ. ದಿನಾಂಕ 19.02.2020 ರಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ರಾತ್ರಿ 10.30 ಗಂಟೆಗೆ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೊಬೈಲ ಫೋನನ್ನು ಯಾವಾಗ ಖರೀದಿ ಮಾಡಿದ್ದು ಎಂದರೆ ಸಾಕ್ಷಿಯು ಅದನ್ನು ಖರೀದಿ ಮಾಡಿದ ದಿನಾಂಕ ಹೇಳಲಾಗುವುದಿಲ್ಲ ಎನ್ನುತ್ತಾರೆ. ನನ್ನ ಮೊಬೈಲನ ಕಿಮ್ಮತ್ತು ರೂ.7000/- ಎಂದು ನಾನು ನನ್ನ ದೂರಿನಲ್ಲಿ ನಮೂದು ಮಾಡಿದ್ದೆನೆಂದರೆ ನಿಜ. ನಾನು ನ್ಯಾಯಾಲಯದಿಂದ ಮೊಬೈಲ ಫೋನನ್ನು ಬಿಡಿಸಿಕೊಳ್ಳುವ ಸಮಯದಲ್ಲಿ ನ್ಯಾಯಾಲಯಕ್ಕೆ ಮೊಬೈಲ ಫೋನ ಖರೀದಿ ಮಾಡಿದ ಬಗ್ಗೆ ರಸೀದಿ ಹಾಜರು ಮಾಡಿದ್ದೆನೆ. ನನಗೆ ಈಗ ತೋರಿಸಿದ ರಸೀದಿಯನ್ನೇ ನಾನೇ ನ್ಯಾಯಾಲಯಕ್ಕೆ ಕೊಟ್ಟಿದ್ದೆ ಎಂದರೆ ನಿಜ. ಸಾಕ್ಷಿಗೆ ದೋಷಾರೋಪಣಾ ಪತ್ರದ ಪುಟ ಸಂಖ್ಯೆ 151 ರಲ್ಲಿರುವ ರಸೀದಿಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಗುರುತಿಸಿದ್ದಾರೆ. ಆ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ1 ಈ ದಾಖಲೆಯು ಜೆರಾಕ್ಸ ಪ್ರತಿ ಎಂದರೆ ನಿಜ. ನಿಡಿ1 ರಲ್ಲಿ ಆ ಮೊಬೈಲ ಫೋನನ ಮೌಲ್ಯ 16500/- ಎಂದು ನಮೂದು ಇದೆ ಎಂದರೆ ನಿಜ. ನಿಡಿ 1 ರಲ್ಲಿ 16500/- ಎಂದು ನಮೂದು ಮಾಡಿದ್ದರಿಂದ ಮತ್ತು ನನ್ನ ದೂರಿನಲ್ಲಿ

ಮೊಬೈಲ ಫೋನಿನ ಮೌಲ್ಯ 7000/- ಎಂದು ನಮೂದು ಮಾಡಿದ್ದರಿಂದ ಈ ಪ್ರಕರಣದಲ್ಲಿ ಜಪ್ತು ಮಾಡಿದ ಮೊಬೈಲ ಫೋನ ನನದಲ್ಲ ಎಂದರೆ ಸರಿಯಲ್ಲ. ನಿಡಿ1 ರ ಪ್ರಕಾರ ನಾನು ಮೊಬೈಲ ಫೋನನ್ನು ದಿನಾಂಕ 30.1.2020 ರಂದು ಖರೀದಿ ಮಾಡಿದ್ದೆನೆಂದರೆ ನಿಜ. ನಾನು ಖರೀದಿ ಮಾಡಿದ ಮೊಬೈಲ ಫೋನ ಹೊಸ ಮೊಬೈಲ ಫೋನ ಎಂದರೆ ನಿಜ. ನನ್ನ ಅಕ್ಕಳ ಮೊಬೈಲ ಫೋನನನ್ನು ಬಿಡಿಸಿಕೊಳ್ಳುವ ಕಾಲಕ್ಕೆ ನಾವು ನ್ಯಾಯಾಲಯಕ್ಕೆ ರಿಸೀದಿಹಾಜರು ಮಾಡಿದ್ದೇವೇ ಇಲ್ಲವೊ ಎಂದು ಹೇಳಲು ನನಗೆ ನೆನಪಿಲ್ಲ. ನನ್ನ ಅಕ್ಕಳಿಗೆ ಸೇರಿದ ಆ ಮೊಬೈಲ ಫೋನನ್ನು ಆಕೆ ಖರೀದಿ ಮಾಡಿದ್ದಳು. ನನ್ನ ಅಕ್ಕ ನ್ಯಾಯಾಲಯಕ್ಕೆ ಮೊಬೈಲ ಫೋನ ವಾಪಸ ಕೊಡುಂವತೆ ಅರ್ಜಿ ಸಲ್ಲಿಸಿಲ್ಲ ಆಕೆ ಪರವಾಗಿ ನಾನೇ ಅರ್ಜಿ ಸಲ್ಲಿಸಿ ಮೊಬೈಲ ಫೋನನ್ನು ಪಡೆದುಕೊಂಡಿದ್ದೆನೆ. ಮೊಬೈಲ ಫೋನನ್ನು ಬಿಡಿಸಿಕೊಡುವಂತೆ ನನಗೆ ನನ್ನ ಅಕ್ಕ ಪಾವರ ಆಫ ಅಟೋರ್ನಿ ಕೊಟ್ಟಿಲ್ಲ ಆದರೆ ಮೌಖಿಕವಾಗಿ ಹೇಳಿದ್ದಳು. ಸದರಿ ಮೊಬೈಲ ಫೋನ ನನ್ನ ಅಕ್ಕಳಿಗೆ ಸೇರಿದ್ದು ಎಂದು ಹೇಳಲು ನೀವು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಹೇಳಲು ನೆನಪಿಲ್ಲ ಎನ್ನುತ್ತಾರೆ. ಚಿನ್ನದ ಚೈನನ್ನು ನಾನು 2016 ಅಥವಾ 2017 ರಲ್ಲಿ ಖರೀದಿ ಮಾಡಿದ್ದೆನು. ಈ ಚಿನ್ನದ ಚೈನನ್ನು ಖರೀದಿ ಮಾಡಿದ ಬಗ್ಗೆ ನಾನು ನ್ಯಾಯಾಲಯಕ್ಕೆ ರಸೀದಿ ಕೊಟ್ಟಿರುವುದಿಲ್ಲ. ನನ್ನ ಆ ಚೈನು 10 ಗ್ರಾಂನದ್ದು ಇತ್ತು. 10 ಗ್ರಾಂನ ಚೈನು ತೆಳು ಇರುತ್ತದೆ ಎಂದರೆ ನಿಜ. ಇಬ್ಬರು ಆರೋಪಿತರು ನಿಮ್ಮ ಕೊರಳಿನಲ್ಲಿರುವ 10 ಗ್ರಾಂ ಚಿನ್ನದ ಚೈನನ್ನು ಜಗ್ಗಿದಾಗ ಆ ಚೈನು ತುಂಡು ತುಂಡಾಯಿತಾ ಅಥವಾ ಹಾಗೆಯೆ ಇತ್ತಾ ಎಂದರೆ ಸಾಕ್ಷಿಯು

ಅದರ ಬಗ್ಗೆ ಲಕ್ಷ ಕೊಟ್ಟಿಲ್ಲ ಎನ್ನುತ್ತಾರೆ. 10 ಗ್ರಾಂನ ಚೈನು ಕೊರಳಿನಲ್ಲಿದುದ್ದನ್ನು ಯಾರಾದರು ಜಗ್ಗಿದರೆ ಕಟ್ಟಾಗುತ್ತದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನಾನು ನ್ಯಾಯಾಲಯದ ಆದೇಶದಂತೆ ಪೊಲೀಸ ಠಾಣೆಯಿಂದ ನನ್ನ ಚೈನನ್ನು ಬಿಡಿಸಿಕೊಂಡಾಗ ಅದು ಸೀಲಾದ ಸ್ಥಿತಿಯಲ್ಲಿ ಇತ್ತು. ಪೂಲೀಸರು ನಿಮಗೆ ಚೈನು ಮತ್ತು ಮೊಬೈಲ ಫೋನನ್ನು ಕೊಟ್ಟಾಗ ಪಂಚರನ್ನು ಕರೆಯಿಸಿ ಸೀಲ ತೆಗೆದುಕೊಟ್ಟರೋ ಎಂದರೆ ಸಾಕ್ಷಿಯು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಫೊಟೋ ತೆಗೆದುಕೊಟ್ಟರು ಎನ್ನುತ್ತಾರೆ. ಪೊಲೀಸರು ಜಪ್ತು ಮಾಡಿದರೆಂದು ಹೇಳುವ ಮುದ್ದೆ ಮಾಲುಗಳಿಗೂ ನನ್ನದೆಂದು ಹೇಳುವ ಚಿನ್ನದ ಚೈನು ಮತ್ತು ಮೊಬೈಲ ಫೋನ ಮತ್ತು ನನ್ನ ಅಕ್ಕಳ ಮೊಬೈಲ ಫೋನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಅವರು ತೋರಿಸಿದ್ದನ್ನೆ ನನಗೆ ಸೇರಿದ್ದು ಎಂದು ಹೇಳಿದ್ದೆನೆಂದರೆ ಸರಿಯಲ್ಲ.

ದಿನಾಂಕ 19.02.2020 ರಂದು ನನ್ನ ಅತ್ತೆಗೆ ಆರಾಮ ಇಲ್ಲದೇ ಇದುದ್ದರಿಂದ ನಾನು ಮತ್ತು ನನ್ನ ಅಕ್ಕ ಎಂ.ಕೆ. ಹುಬ್ಬಳ್ಳಿಗೆ ಹೋಗಿದ್ದೆವು. ನಾವು ಎಂ.ಕೆ.ಹುಬ್ಬಳಿಗೆ ನನ್ನ ಅತ್ತೆಗೆ ಆರಾಮ ಇಲ್ಲದೇ ಇರುವ ಕಾರಣ ನೋಡಲು ಹೋಗಿದ್ದೆವೆಂದು ನನ್ನ ದೂರಿನಲ್ಲಾಗಲೀ ಹೇಳಿಕೆಯನ್ನಾಗಲೀ ಹೇಳಿಲ್ಲ ಎಂದರೆ ನಿಜ. ನನ್ನ ಅಕ್ಕ ಚಾಸಾ 8 ರವರಿಗೆ ಮದುವೆ ಆಗಿದೆ ಆಕೆಯು ಗಂಡನ ಮನೆಯಲ್ಲಿ ಇಲ್ಲ ನಮ್ಮ ಜೊತೆಯಲ್ಲಿ ವಾಸವಾಗಿದ್ದಾರೆ. ಚಾಸಾ 8 ರವರ ಗಂಡ ಮೃತ ಪಟ್ಟಿದ್ದರಿಂದ ಚಾಸಾ 8 ರವರಿಗೆ ಬೇರೆ ಮದುವೆ ಮಾಡಿದ್ದರಿಂದ ಆಕೆ ನಮ್ಮ ಜೊತೆ ವಾಸವಾಗಿದ್ದಾರೆ. ಈ ವಿಷಯವನ್ನು ನನ್ನ

ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ನಿಜ. ನನ್ನ ತಂದೆ ತಾಯಿಗೆ ನಾನೊಬ್ಬನೆ ಮಗ ಎಂದರೆ ನಿಜ. ನನಗೆ ಸಂಬಂಧ ಪಟ್ಟಂತೆ ಬೈಲೂರ ಮತ್ತು ಕೊದಾಂಪೂರ ನಲ್ಲಿ ಜಮೀನುಗಳು ಮತ್ತು ಮನೆ ಇದೆ ಎಂದರೆ ನಿಜ. ನಾನು ಮಧ್ಯಪಾನ ಮಾಡುವ ಅಭ್ಯಾಸ ಹೊಂದಿದ್ದೆನೆಂದರೆ ಸರಿಯಲ್ಲ. ನಾನು ಜೂಜಾಡುವ ಅಭ್ಯಾಸ ಹೊಂದಿದ್ದೆನೆಂದರೆ ಸರಿಯಲ್ಲ. ನೀವು ಮಧ್ಯಪಾನ ಮಾಡುವುದರಿಂದ, ಜೂಜಾಡುವುದರಿಂದ ನಿಮಗೆ ಸಾಕಷ್ಟು ವೈರಿಗಳು ಇದ್ದಾರೆ ಎಂದರೆ ನಾನು ಮಧ್ಯಪಾನ ಮಾಡುವುದಿಲ್ಲ ಜೂಜಾಡುವುದಿಲ್ಲ ನನಗೆ ವೈರಿಗಳು ಯಾರು ಇಲ್ಲ ಎನ್ನುತ್ತಾರೆ. ನನ್ನ ಮೇಲೆ ದ್ವೇಷದಿಂದ ಬೇರೆ ಯಾರೋ ಮಾಡಿದ ಕೃತ್ಯವನ್ನು ಆರೋಪಿತರು ಮಾಡಿದ್ದಾರೆಂದು ನಾನು ಪೊಲೀಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೆನೆಂದರೆ ಸರಿಯಲ್ಲ.

ಕಿತ್ತೂರ ಪೊಲೀಸ ಠಾಣೆಯಲ್ಲಿರುವ ಚೇತನ ಬುದ್ನಿ ಪೊಲೀಸ ಕಾನ್ಸಟೇಬಲ ಇವರ ಪರಿಚಯ ನನಗೆ ಇಲ್ಲ. ಕಿತ್ತೂರ ಪೊಲೀಸ ಠಾಣೆಯ ಚೆಕ್‌ಪೋಸ್ಟ ಎಂ.ಕೆ. ಹುಬ್ಬಳ್ಳಿಯಲ್ಲಿ ಎಎಸ್ಐ ಗಿರಿಯಾಲ ಇವರು ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಎಎಸ್ಐ ಗಿರಿಯಾಲ ಇವರು ನನ್ನ ಸಂಬಂಧಿಕರು ಎಂದರೆ ನಿಜ. ಎಎಸ್ಐ ಗಿರಿಯಾಲ ಇವರು ಪೊಲೀಸ ಇಲಾಖೆಯಲ್ಲಿ ಕೆಲಸಮಾಡುತ್ತಾರೆ ಎಂದರೆ ಸಾಕ್ಷಿಯು ಅವರು ಪೊಲೀಸ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ನಿಜ ಆದರೆ ಅವರ ಹುದ್ದೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಪೊಲೀಸರಿಗೆ ದೂರು ಕೊಡಲು ಕಿತ್ತೂರ ಪೊಲೀಸ ಠಾಣೆಗೆ ಹೋದಾಗ ಮಧ್ಯಾಹ್ನ 2.00 ರಿಂದ 03.00 ಗಂಟೆ ಆಗಿರಬಹುದು. ನಾನು ಪೊಲೀಸ ಠಾಣೆಗೆ ದೂರು ಕೊಡಲು ಹೋದಾಗ ಪೊಲೀಸ ಠಾಣೆಯಲ್ಲಿ

ಪಿಎಸ್ಐ ಇದ್ದರು ಮತ್ತು ಕಾನ್ಸಟೇಬಲ ಇದ್ದರು. ನಿಪಿ 1 ದೂರನ್ನು ಪೊಲೀಸರಿಗೆ ನಾನೇ ಬರೆದು ಕೊಟ್ಟಿದ್ದೆನು. ಪೊಲೀಸರು ಹೇಳಿದಂತೆ ನಾನು ನಿಪಿ 1 ನ್ನು ಬರೆದೆನೆಂದರೆ ಸರಿಯಲ್ಲ. ನಿಪಿ 1 ನ್ನು ಬರೆಯಲು ನನಗೆ ಒಂದು ಗಂಟೆಯಿಂದ ಒಂದುವರೆ ಗಂಟೆ ಹಿಡಿಸಿತು.

ಈ ಹಂತದಲ್ಲಿ ನ್ಯಾಯಾಲಯದ ವೇಳೆ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಆರೋಪಿ ಪರ ಮಾನ್ಯ ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.

ದಿನಾಂಕಃ 04-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಿಮಗೆ ದೂರು ಬರೆಯುವ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಪೊಲೀಸರು ಏನು ಘಟನೆ ನಡೆದಿದೆ ಅದನ್ನು ಬರೆದು ಕೊಡಿ ಎಂದು ಹೇಳಿದ ಕಾರಣ ನಾನು ನಡೆದ ಘಟನೆಯನ್ನು ನನ್ನ ದೂರಿನಲ್ಲಿ ಬರೆದು ಕೊಟ್ಟೆನು ಎನ್ನುತ್ತಾರೆ. ನಾನು ಪೊಲೀಸರು ಹೇಳಿದ ಪ್ರಕಾರ ದೂರು ಬರೆದು ಕೊಟ್ಟೆನೆಂದರೆ ಸರಿಯಲ್ಲ. ನೀವು ನಿಪಿ ದೂರು ಕೊಡಲು ಹೋದಾಗ ಆರೋಪಿತರೆಲ್ಲರೂ ಅಲ್ಲಿ ಪೊಲೀಸ ಠಾಣೆಯಲ್ಲಿ ಇದ್ದರು ಎಂದರೆ ಸಾಕ್ಷಿಯು ದೂರು ಕೊಡಲು ಹೋದಾಗ ಪೊಲೀಸ ಠಾಣೆಯಲ್ಲಿ ಇರಲಿಲ್ಲ ಎನ್ನುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ದೂರು ಕೊಡಲು ಹೋದಾಗ ಆರೋಪಿತರು ಪೊಲೀಸ ಠಾಣೆಯಲ್ಲಿ ಇದ್ದರು ಎಂದು ಹೇಳಿದೆನೆಂದರೆ ಸರಿಯಲ್ಲ. ನೀವು ಯಾವುದೇ ಕಾಲಕ್ಕೆ ಆರೋಪಿತರನ್ನು ಪೊಲೀಸ ಠಾಣೆಯಲ್ಲಿ ನೋಡಿಲ್ಲ ಎಂದರೆ ಸಾಕ್ಷಿಯು ಒಬ್ಬ ಆರೋಪಿಯನ್ನು ನಾನು ಪೊಲೀಸ ಠಾಣೆಯಲ್ಲಿ ನೋಡಿದ್ದೆನೆ ಎನ್ನುತ್ತಾರೆ. ನಾನು ನಿಪಿ1 ನನ್ನ ದೂರಿನಲ್ಲಿ ಯಾವುದೇ ಆರೋಪಿತರ ಹೆಸರು, ವಿಳಾಸ ನಮೂದು ಮಾಡಿರುವುದಿಲ್ಲ. ನಾನು ಪೊಲೀಸರಿಗೆ ಬಾಯಿ ಮಾತಿನಲ್ಲಿ ದೂರು ಕೊಟ್ಟ ಒಂದುವರೆ ತಿಂಗಳ ನಂತರ ಆರೋಪಿತರ ಹೆಸರು ಮತ್ತು ವಿಳಾಸ ಪೊಲೀಸರು ಹೇಳಿದ ಮೇರೆಗೆ ಗೊತ್ತಾಯಿತು. ನಾನು ಪೊಲೀಸರಿಗೆ ಲಿಖಿತ ದೂರನ್ನು ದಿನಾಂಕ 15.05.2020 ರಂದು ಕೊಟ್ಟಿದ್ದೆನೆಂದರೆ ನಿಜ. ನಾನು ದಿನಾಂಕ

15.05.2020 ರಂದು ಕೊಟ್ಟ ಲಿಖಿತ ದೂರಿನಲ್ಲಿ ಆರೋಪಿತರ ಹೆಸರು ಬರೆದು ಕೊಟ್ಟಿರುತ್ತೇನೆ. ನಿಪಿ 1 ದೂರಿನಲ್ಲಿ ಆರೋಪಿತರ ಹೆಸರನ್ನು ಬರೆಯಲು ನಿಮಗೆ ಯಾರು ಹೇಳಿದ್ದರೆಂದರೆ ಸಾಕ್ಷಿಯು ಪೊಲೀಸರು ಹೇಳಿದ ಮೇರೆಗೆ ಗೊತ್ತಾಯಿತು ಎನ್ನುತ್ತಾರೆ. ಆರೋಪಿತರ ಹೆಸರುಗಳನ್ನು ನನಗೆ ಪೊಲೀಸರು ಹೇಳಿದ ಮೇರೆಗೆ ಗೊತ್ತಾಯಿತು. ಪೊಲೀಸರು ಆರೋಪಿತರ ಹೆಸರು ಹೇಳಿದ ಕಾರಣ ನೀವು ಆರೋಪಿತರನ್ನು ಗುರುತಿಸಿದ್ದೀರಿ ಎಂದರೆ ಸಾಕ್ಷಿಯು ಆರೋಪಿತರ ಮುಖ್ಯ ಪರಿಚಯ ಇದುದ್ದರಿಂದ ಗುರುತಿಸಿದ್ದೆನೆ ಎನ್ನುತ್ತಾರೆ. ನಾನು ಆರೋಪಿತರ ಮುಖ್ಯ ಪರಿಚಯ ಇದುದ್ದರಿಂದ ಅವರನ್ನು ಗುರುತಿಸಿದ್ದೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಆರೋಪಿತರನ್ನು ಗುರುತಿಸಲು ಗುರುತು ಹಿಡಿಯುವ ಕವಾಯತಿಗೆ ನೋಟಿತನ್ನು ನಿಮಗೆ ಸಿಪಿಐ ರವರು ಕೊಟ್ಟರೋ, ಪಿಎಸ್ಐ ರವರು ಕೊಟ್ಟರೋ ಎಂದರೆ ಸಾಕ್ಷಿಯು ಯಾರು ಕೊಟ್ಟರು ಎಂದು ಹೇಳಲಾಗುವುದಿಲ್ಲ ಎನ್ನುತ್ತಾರೆ. ನಿಮಗೆ ಗುರುತಿನ ಕವಾಯತಿನ ನೋಟಿಸ ಎಷ್ಟು ಬಾರಿ ಬಂದಿತ್ತು ಎಂದರೆ ಸಾಕ್ಷಿಯು ಅದನ್ನು ಹೇಳಲು ನೆನಪಿಲ್ಲ ಎನ್ನುತ್ತಾರೆ. ಯಾವ ಯಾವ ದಿನಾಂಕದಂದು ನೊಟೀಸು ಬಂದಿತ್ತೆಂದು ನನಗೆ ದಿನಾಂಕ ಹೇಳಲು ನೆನಪಿಲ್ಲ. ನನಗೆ ಯಾವ ದಿನಾಂಕದಂದು ನೋಟಿಸು ಬಂದಿತ್ತೆಂದು ನನಗೆ ದಿನಾಂಕ ಹೇಳಲಾಗುವುದಿಲ್ಲ ಎಂದರೆ ನಿಜ. ನನಗೆ ಆ ರೀತಿ ಗುರುತಿನ ಕವಾಯತಿಗೆ ನೋಟಿಸ ಕೊಟ್ಟವರು ಯಾರು ಎಂದು ನನಗೆ ಹೇಳಲಾಗವುದಿಲ್ಲ ಎಂದರೆ ನಿಜ.

ನೀವು ಹಿಂಡಲಗಾ ಜೈಲಿಗೆ ಗುರುತಿನ ಕವಾಯತಿಗೆ ಯಾವ ದಿನಾಂಕ

ಹೋಗಿದ್ದು ಎಂದರೆ ಸಾಕ್ಷಿಯು ದಿನಾಂಕ ಹೇಳಲು ನೆನಪಿಲ್ಲ ಎನ್ನುತ್ತಾರೆ. ಗುರುತಿನ ಕವಾಯತಿನ ದಿನ ನನ್ನ ಜೊತೆ ನನ್ನ ಅಕ್ಕ ಚಾಸಾ 8, ಸಿಪಿಐ ರವರು ಮತ್ತು ಪಿಎಸ್ಐ ರವರು ಹಿಂಡಲಗಾ ಜೈಲಿಗೆ ಬಂದಿದ್ದರು ಎಂದರೆ ನಿಜ. ನೀವು ಹಿಂಡಲಗಾ ಜೈಲಿಗೆ ಹೋದಾಗ ಕಿತ್ತೂರ ತಹಸೀಲ್ದಾರ, ಚಿಕ್ಕೋಡಿ ತಹಸೀಲ್ದಾರ ಮತ್ತು ಸಿಪಿಐ, ಪಿಎಸ್ಐ, ಪೊಲೀಸರು ಇದ್ದರು ಎಂದರೆ ಸಾಕ್ಷಿಯು ತಹಿಸೀಲ್ದಾರವರು ಮತ್ತು ಪೊಲೀಸರು ಇದ್ದರು ಎನ್ನುತ್ತಾರೆ. ನಾನು ಹಿಂಡಲಗಾ ಜೈಲಿಗೆ ಹೋದಾಗ ಜೈಲಿನ ಸುಪ್ರಿಟೆಂಡೆಂಟ್ ಮತ್ತು ಜೈಲಿನ ಪೊಲೀಸರು ಇದ್ದರು ಎಂದರೆ ನಿಜ. ಕಿತ್ತೂರ ತಹಸೀಲ್ದಾರ, ಚಿಕ್ಕೋಡಿ ತಹಸೀಲ್ದಾರ, ಸಿಪಿಐ, ಪಿಎಸ್ಐ ಮತ್ತು ಪೊಲೀಸರು ಇದ್ದ ಸಮಯದಲ್ಲಿ ಹಿಂಡಲಗಾ ಜೈಲಿನಲ್ಲಿ ಗುರುತಿನ ಕವಾಯತು ನಡೆಯಿತು ಎಂದರೆ ನಿಜ. ನೀವು ಹಿಂಡಲಗಾ ಜೈಲಿಗೆ ಹೋದಾಗ ಪೊಲೀಸರು ಕಾಗದ ಪತ್ರಗಳನೆಲ್ಲಾ ಟೈಪ ಮಾಡಿ ಇಟ್ಟಿದ್ದರು ಎಂದರೆ ಸಾಕ್ಷಿಯು ಅದನ್ನು ನನಗೆ ಹೇಳಲು ನೆನಪಿಲ್ಲ ಎನ್ನುತ್ತಾರೆ. ಅಲ್ಲಿ ತಯಾರು ಮಾಡಿದ ದಾಖಲೆಗೆ ಸಹಿ ಹಾಕು ಎಂದ ಕಾರಣ ನೀವು ಸಹಿ ಹಾಕಿದ್ದೀರಿ ಎಂದರೆ ಸಾಕ್ಷಿಯು ಅಲ್ಲಿ ನನಗೆ ಆರೋಪಿತರನ್ನು ಗುರುತಿಸುವಂತೆ ಹೇಳಿದಾಗ ನಾನು ಆರೋಪಿತರನ್ನು ಗುರುತಿಸಿದ ನಂತರ ಬರೆದ ದಾಖಲೆಗೆ ಸಹಿ ಹಾಕಿದೆನು ಎನ್ನುತ್ತಾರೆ. ಆರೋಪಿತರನ್ನು ನಾನು ಗುರುತಿಸಿದ ನಂತರ ಅಲ್ಲಿ ಪೇಪರ್ಸ ರೆಡಿ ಇದ್ದ ಕಾರಣ ನನಗೆ ಮತ್ತು ನನ್ನ ಅಕ್ಕಳಿಗೆ ಸಹಿ ಹಾಕಲು ಹೇಳಿದ ಕಾರಣ ನಾವು ಸಹಿ ಹಾಕಿದೆವು ಎನ್ನುತ್ತಾರೆ. ನಾನು ಮತ್ತು ನನ್ನ ಅಕ್ಕ ಚಾಸಾ 8 ರವರ ಸಮಕ್ಷಮವೇ ಇಬ್ಬರು ಇದ್ದಾಗ ಆರೋಪಿತರ ಗುರುತಿನ ಕವಾಯತ ನಡೆಯಿತು ಎಂದರೆ ನಿಜ. ನಾನು ಮತ್ತು ನನ್ನ ಅಕ್ಕ ಸಹಿ ಹಾಕಿದ ಎಲ್ಲಾ ದಾಖಲೆಗಳಿಗೆ

ಚಿಕ್ಕೋಡಿ ತಹಸೀಲ್ದಾರವರು ಸಹಿ ಹಾಕಿದರು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕೋಡಿ ತಹಸೀಲ್ದಾರಾಗಲೀ, ಕಿತ್ತೂರತ ಹಸೀಲ್ದಾರಾಗಲೀ ನಿಮ್ಮ ಹೇಳಿಕೆ ಪಡೆದಿದ್ದಾರಾ ಎಂದರೆ ಸಾಕ್ಷಿಯು ಅವರು ಇಬ್ಬರು ಹೇಳಿಕೆ ಪಡದಿದ್ದಾರೆ ಎನ್ನುತ್ತಾರೆ. ನಿಮಗೆ ಹಿಂಡಲಗಾದಲ್ಲಿ 6 ಜನ ಆರೋಪಿತರನ್ನು ತೋರಿಸಿದ್ದಾರೆ ಎಂದರೆ ಸಾಕ್ಷಿಯು 3 ಜನ ಆರೋಪಿತರನ್ನು ತೋರಿಸಿದ್ದಾರೆ ಎನ್ನುತ್ತಾರೆ. 3 ಜನ ಆರೋಪಿತರನ್ನು ಮಾತ್ರ ನಿಲ್ಲಿಸಿ ಗುರುತಿನ ಕವಾಯತ ಮಾಡಿಸಿದ್ದರು ಎಂದರೆ ಸಾಕ್ಷಿಯು 10 ಜನರನ್ನು ನಿಲ್ಲಿಸಿ ಅದರಲ್ಲಿರುವ ಆರೋಪಿಯನ್ನು ಗುರುತಿಸಲು ಹೇಳಿದ್ದರು ಎನ್ನುತ್ತಾರೆ. ಆ ಉಳಿದ 10 ಜನರಲ್ಲಿ ಉಳಿದವರ ಹೆಸರು ನನಗೆ ಹೇಳಲಾಗುವುದಿಲ್ಲ. ಗುರುತಿನ ಕವಾಯತನ್ನು ಒಂದು ಸುತ್ತಿನಲ್ಲಿ ಮಾತ್ರ ಮಾಡಲಾಗಿತ್ತು ಎಂದರೆ ಸಾಕ್ಷಿಯು 5 ಸುತ್ತಿನಲ್ಲಿ ಗುರುತಿನ ಕವಾಯತು ಮಾಡಲಾಗಿತ್ತು ಎನ್ನುತ್ತಾರೆ. 1 ನೇ ಸುತ್ತಿನಲ್ಲಿ ಆರೋಪಿಯನ್ನು ಯಾವ ನಂಬರನಲ್ಲಿ ನಿಲ್ಲಿಸಲಾಗಿತ್ತು, 2 ನೇ ಸುತ್ತಿನಲ್ಲಿ ಯಾವ ನಂಬರನಲ್ಲಿ ನಿಲ್ಲಿಸಲಾಗಿತ್ತು ಎಂದು ಮತ್ತು ಇದೇ ರೀತಿ 3, 4 ಮತ್ತು 5 ನೇ ಸುತ್ತಿನಲ್ಲಿ ಯಾವ ನಂಬರನಲ್ಲಿ ನಿಲ್ಲಿಸಲಾಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ. ಗುರುತಿನ ಕವಾಯತಿನ ಸಮಯದಲ್ಲಿ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಗುರುತಿನ ಕವಾಯತು ನಡೆಸಲೆಂದ ನಾನು ಹಿಂಡಲಗಾ ಜೈಲಿಗೆ ಆರೋಪಿತರನ್ನು ಗುರುತಿಸುವ ಸಲುವಾಗಿ 2 ಬಾರಿ ಹೋಗಿದ್ದೆನು. ನಾನು ಮತ್ತು ಚಾಸಾ 8 ಆರೋಪಿತರ ಗುರುತಿನ ಕವಾಯತಿಗೆ ಹಿಂಡಲಗಾ ಜೈಲಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಗುರುತಿನ ಕವಾಯತು ಆಗಿಲ್ಲ

ಎಂದರೆ ಸರಿಯಲ್ಲ. ನಾವು ಹಿಂಡಲಗಾ ಜೈಲಿನಲ್ಲಿ ಗುರುತಿನ ಕವಾಯತಿನ ಸಮಯದಲ್ಲಿ ಆರೋಪಿತರನ್ನು ಗುರುತಿಸಿದೆವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆವೆಂದರೆ ಸರಿಯಲ್ಲ.

ಇನ್ನೊಂದು ಬಾರಿ ನಾವು ಗುರುತಿನ ಕವಾಯತಿನ ಸಲುವಾಗಿ ಯಾವ ದಿನಾಂಕದಂದು ಹಿಂಡಲಗಾ ಜೈಲಿಗೆ ಹೊದೆವೆಂದು ನನಗೆ ಹೇಳಲಾಗುವುದಿಲ್ಲ. 2 ನೇ ಬಾರಿ ನಾವು ಒಬ್ಬ ಆರೋಪಿಯನ್ನು ಗುರುತಿಸುವ ಸಲುವಾಗಿ ಹಿಂಡಲಗಾ ಜೈಲಿಗೆ ಹೋಗಿದ್ದೆವು ಆ ಆರೋಪಿಯ ಹೆಸರು ನನಗೆ ಹೇಳಲು ನೆನಪಿಲ್ಲ. ಆ ಗುರುತಿನ ಕವಾಯತಿನ ನೋಟಿಸು ಯಾವ ತಾರೀಖನಂದು ನನಗೆ ಕೊಡಲಾಯಿತು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ. 2 ನೇ ಬಾರಿ ಗುರುತಿನ ಕವಾಯತಿನ ದಿನ ಹೋದಾಗ ನಾನು ಮತ್ತು ಕಿತ್ತೂರ ಸಿಪಿಐ, ಕಿತ್ತೂರ ಪಿಎಸ್ಐ, ಪೊಲೀಸರು ಎಲ್ಲರ ಜೊತೆ ಹಿಂಡಲಗಾ ಜೈಲಿಗೆ ಹೋಗಿದ್ದೆವು ಎಂದರೆ ನಿಜ. ಆ ದಿನವು ಗುರುತಿನ ಕವಾಯತನ್ನು ಕಿತ್ತೂರಿನ ಸಿಪಿಐ, ಪಿಎಸ್ ಐ , ಕಿತ್ತೂರಿನ ತಹಸೀಲ್ದಾರ ಇವರ ಸಮಕ್ಷಮ ಗುರುತಿನ ಕವಾಯತು ಮಾಡಲಾಯಿತು ಎಂದರೆ ನಿಜ. ಗುರುತಿನ ಕವಾಯತಿನ ಸಮಯದಲ್ಲಿ ಜೈಲು ಸುಪರಿಟೆಂಡೆಂಟ್ ಮತ್ತು ಜೈಲಿನ ಪೊಲೀಸ ಸಿಬ್ಬಂದಿ ಇದ್ದರು ಎಂದರೆ ನಿಜ. ಆ ಸಮಯದಲ್ಲು ನಾನು ಮತ್ತು ನನ್ನ ಅಕ್ಕ ಚಾಸಾ 8 ಇಬ್ಬರು ಸೇರಿ ಆರೋಪಿಯನ್ನು ಗುರುತಿಸಿದ್ದೆವೆಂದರೆ ನಿಜ. ಆ ದಿನ 5 ರಿಂದ 6 ಸುತ್ತು ಗುರುತಿನ ಕವಾಯತು ನಡೆಸಲಾಗಿತ್ತು. ಆ ದಿನ ಒಬ್ಬನೇ ಆರೋಪಿಯನ್ನು ನಿಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. 10 ಜನ ಇತರೇ ಕೈದಿಗಳೊಂದಿಗೆ ಆರೋಪಿಯನ್ನು ನಿಲ್ಲಿಸಲಾಗಿತ್ತು. ಅಲ್ಲಿ ನಿಂತಿದವರ ಎಲ್ಲರ ಹೆಸರುಗಳನ್ನು ನನಗೆ

ಹೇಳಲಾಗುವುದಿಲ್ಲ. 1 ರಿಂದ 5 ಸುತ್ತಿನಲ್ಲಿ ಯಾವ ಯಾವ ಸುತ್ತಿನಲ್ಲಿ ಆ ಆರೋಪಿಯನ್ನು ಎಷ್ಟನೇ ಸಾಲಿನಲ್ಲಿ ನಿಲ್ಲಿಸಲಾಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ.ಈ 5 ಸುತ್ತಿನಲ್ಲಿ ಆರೋಪಿಯು ಯಾವ ಬಣ್ಣದ ಬಟ್ಟೆ ಧರಿಸಿದನೆಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ. ಆ ದಿನವು ನನ್ನ ಹೇಳಿಕೆಯನ್ನು ತಹಸೀಲ್ದಾರ ಪಡೆದಿದ್ದರು ಎಂದರೆ ನಿಜ.

ಈ ಹಂತದಲ್ಲಿ ಊಟದ ವಿರಾಮವಾದ ಕಾರಣ ಆರೋಪಿ ಪರ ಮಾನ್ಯ ವಕೀಲರ ಕೋರಿಕೆ ಮೇರೆಗೆ ಮಧ್ಯಾಹ್ನ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4 ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**

ದಿನಾಂಕಃ 04-08-2022 ರಂದು ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

2 ನೇ ಬಾರಿ ಗುರುತಿನ ಕವಾಯತ ಆದ ನಂತರ ನಿಮಗೆ ಆರೋಪಿಯನ್ನು ಗುರುತಿಸುವ ಸಲುವಾಗಿ ಯಾವಾಗ ನೋಟಿಸ ಬಂತು ಎಂದರೆ ಸಾಕ್ಷಿಯು ನೋಟಿಸಿನ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ನೀವು 2 ಬಾರಿ ಹಿಂಡಲಗಾ ಜೈಲಿಗೆ ಆರೋಪಿತರನ್ನು ಗುರುತಿಸಲು ಹೊದ ನಂತರ ಮತ್ತೊಮ್ಮೆ ಹಿಂಡಲಗಾಗೆ ಯಾವಾಗ ಹೊಗಿದ್ದೀರಿ ಎಂದರೆ ಸಾಕ್ಷಿಯು ನಂತರ ಹಿಂಡಲಗಾ ಜೈಲಿಗೆ ಹೋಗಿಲ್ಲ ಕಿತ್ತೂರ ಪೊಲೀಸ ಠಾಣೆಗೆ ಹೋಗಿದ್ದೆನು ಎನ್ನುತ್ತಾರೆ. ಕಿತ್ತೂರ ಪೊಲೀಸ ಠಾಣೆಗೆ ನಿಮಗೆ ಕರೆಸಲು ಯಾರು ನೋಟಿಸ ಕೊಟ್ಟಿದ್ದು ಎಂದರೆ ಸಾಕ್ಷಿಯು ನೋಟಿಸ ಕೊಟ್ಟವರ ಹೆಸರು ನನಗೆ ಹೇಳಲು ನೆನಪಿಲ್ಲ ಎನ್ನುತ್ತಾರೆ. ಕಿತ್ತೂರ ಪೊಲೀಸ ಠಾಣೆಗೆ ಬಂದು ಆರೋಪಿಯನ್ನು ಗುರುತಿಸುವಂತೆ ನಮಗೆ ನೋಟಿಸ ನೀಡಲಾಗಿತ್ತು. ನೀವು ಕಿತ್ತೂರ ಪೊಲೀಸ ಠಾಣೆಗೆ ಯಾವ ಆರೋಪಿಯನ್ನು ಗುರುತಿಸಲು ಹೋಗಿದ್ದು ಎಂದರೆ ಸಾಕ್ಷಿಯು ಅದನ್ನು ಹೇಳಲು ನನಗೆ ನೆನಪಿಲ್ಲ ಎನ್ನುತ್ತಾರೆ. ನಾನು ಕಿತ್ತೂರ ಪೊಲೀಸ ಠಾಣೆಗೆ ಹೋಗಿ ಒಬ್ಬ ಆರೋಪಿಯನ್ನು ಗುರುತಿಸಿದ್ದೆನೆ. ಕಿತ್ತೂರ ಪೊಲೀಸ ಠಾಣೆಯಲ್ಲಿ ತಹಸೀಲ್ದಾರರು ಇದ್ದರು ಎಂದರೆ ಸಾಕ್ಷಿಯು ತಹಸೀಲ್ದಾರ ಇರಲಿಲ್ಲ ಎನ್ನುತ್ತಾರೆ. ಕಿತ್ತೂರ ಪೊಲೀಸ ಠಾಣೆಯಲ್ಲಿ ನನಗೆ ಆರೋಪಿಯನ್ನು ಗುರುತಿಸಲು ಹೇಳಿದಾಗ ಆರೋಪಿ ಒಬ್ಬನೇ ಇದ್ದನು ಪೊಲೀಸರು ಇದ್ದರು. ಕಿತ್ತೂರ ಪೊಲೀಸ ಠಾಣೆಯಲ್ಲಿ ಒಬ್ಬ ಆರೋಪಿಯನ್ನು ನೆ°ೋಡಿದ ನಂತರ

ಇನ್ನೊಬ್ಬ ಆರೋಪಿಯನ್ನು ನೀವು ಯಾವಾಗ ನೋಡಿದ್ದು ಎಂದರೆ ಸಾಕ್ಷಿಯು ಇನ್ನೊಬ್ಬ ಆರೋಪಿಯನ್ನು ಪೊಲೀಸ ಠಾಣೆಯಲ್ಲಿ ನೋಡಿಲ್ಲ ಎನ್ನುತ್ತಾರೆ. ಇನ್ನೊಬ್ಬ ಆರೋಪಿಯನ್ನು ಪೊಲೀಸರು ನನಗೆ ತೋರಿಸಿಲ್ಲ ಎಂದರೆ ನಿಜ. ನನಗೆ ಹಿಂಡಲಗಾ ಜೈಲಿಗೆ ಆರೋಪಿತರನ್ನು ಗುರುತಿಸಲೇಂದು ಗುರುತಿನ ಕವಾಯತಿಗೆ 2 ಬಾರಿ ನೋಟಿಸ ಕೊಡಲಾಗಿತ್ತೆಂದು ಆಗ ನಾನು ಮತ್ತು ನನ್ನ ಅಕ್ಕ ಚಾಸಾ 8 ಹಿಂಡಲಗಾ ಜೈಲಿಗೆ ಹೋಗಿ ಆರೋಪಿತರಿಗೆ ಗುರುತಿಸಿದ್ದೆವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾನು ಕಿತ್ತೂರ ಪೊಲೀಸ ಠಾಣೆಗೆ ಹೋಗಿ ಒಬ್ಬ ಆರೋಪಿಯನ್ನು ಗುರುತಿಸಿದೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾಲಯದ ವೇಳೆ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಆರೋಪಿ ಪರ ಮಾನ್ಯ ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.

ದಿನಾಂಕಃ **03-11-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ವಕೀಲರಿಂದಃ</u>

ನನಗೆ ಪೊಲೀಸರು ಕರೆದಾಗ ನಾನು ಮತ್ತು ಚಾಸಾ 8 ಇಬ್ಬರು ಕೂಡಿ ಪೊಲೀಸ ಠಾಣೆಗೆ ಹೋದೆವೆಂದರೆ ನಿಜ. ಪೊಲೀಸರು ತೆಗೆದ ಫೊಟೋದಲ್ಲಿ ನಾನು ಮತ್ತು ನನ್ನ ತಂಗಿ ಚಾಸಾ 8 ನಿಂತಿದ್ದೇವೆಂದರೆ ನಿಜ. ಪಂಚನಾಮೆಯನ್ನು ಮಾಡುವಾಗ ಪಂಚರು ಯಾರು ಇದ್ದರೆಂದು ಮತ್ತು ಪಂಚನಾಮೆಯನ್ನು ಯಾರು ಬರೆದರೆಂದು ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ. ಗುನ್ನಾ ಜಾಗದ ನಾಕಶೆಯನ್ನು ಯಾರು ತೆಗೆದರೆಂದು ನನಗೆ ಹೇಳಲು ಆಗುವುದಿಲ್ಲ.

ನಾನು ಕೊಟ್ಟ ನಿಪಿ 1 ದೂರಿನಲ್ಲಿ ರಸ್ತೆ ಬದಿಗೆ ನಿಂತಿದ್ದ 3 ಜನರು ನನಗೆ ಕೈ ಮಾಡಿದರೆಂದು ನಮೂದಿಸಿರುತ್ತೇನೆ. ನೀವು ನಿಮ್ಮ ನಿಪಿ 1 ದೂರಿನಲ್ಲಿ 3 ಜನರು ಕೈ ಮಾಡಿ ನಿಲ್ಲಿಸಿದ್ದರು ಎಂದು ಹೇಳಿದ್ದು ನಿಜನಾ ಅಥವಾ ನಿಮ್ಮ ಮುಖ್ಯ ವಿಚಾರಣೆಯಲ್ಲಿ 3 ಜನರಲ್ಲಿ ಒಬ್ಬನು ಮೋಟರ ಸೈಕಲನ ಚಾವಿಯನ್ನು ತೆಗೆದನೆಂದು ಆಗ ಅಲ್ಲಿಗೆ ಇನ್ನು 3 ಜನ ಓಡಿ ಬಂದರು ಎಂದು ಹೇಳಿದ್ದು ನಿಜನಾ ಎಂದರೆ ಸಾಕ್ಷಿಯು ನಾನು ನಿಪಿ 1 ದೂರಿನಲ್ಲಿ ನಮೂದಿಸಿದಂತೆ 3 ಜನ ನನ್ನನ್ನು ಕೈ ಮಾಡಿ ನಿಲ್ಲಿಸಿ ನಂತರ 3 ಜನರಲ್ಲಿ ಒಬ್ಬನು ನನ್ನ ಮೋಟರ ಸೈಕಲ ಚಾವಿಯನ್ನು ತೆಗೆದನು ಮತ್ತು ಅಲ್ಲಿ ನಿಂತ 3 ಜನ ಓಡಿ ನಮ್ಮ ಹಿಂದಿನಿಂದ ಬಂದರು ಎನ್ನುತ್ತಾರೆ. ಇದರಲ್ಲಿ ಯಾವುದು ಸತ್ಯ ಎಂದರೆ ನನ್ನನ್ನು 3 ಜನ ಕೈ ಮಾಡಿ ನಿಲ್ಲಿಸಿದ್ದು ನಿಜ ಎನ್ನುತ್ತಾರೆ. ನೀವು ನಿಮ್ಮ

ಮುಖ್ಯ ವಿಚಾರಣೆಯಲ್ಲಿ ಅಲ್ಲಿದ್ದ 6 ಜನರು ನಿಮ್ಮಲ್ಲಿದ್ದ ವಸ್ತುಗಳಾದ ಮೊಬೈಲ ಫೋನ, ಹಣ ಮತ್ತು ಬಂಗಾರ ಚೈನ ಕೊಡಿ ಎಂದು ಕೇಳಿದರೆಂದು ಹೇಳಿದ್ದೀರಿ, ನಿಮ್ಮ ನಿಪಿ 1 ದೂರಿನಲ್ಲಿ 3 ಜನರು ಬಂದು ಅದರಲ್ಲಿ ಒಬ್ಬನು ನನ್ನ ಮೊಟರ ಸೈಕಲನ ಚಾವಿ ಕಿತ್ತುಕೊಂಡನು ಉಳಿದವರು ನಮಗೆ ನಿಮ್ಮ ಕಡೆಯಿಂದ ಮೊಬೈಲ, ಹಣ, ಅಭರಣಗಳನ್ನು ಕೊಡಿ ಎಂದು ನೀವು ಬರೆಸಿದ್ದೀರಿ ಎಂದರೆ ಸಾಕ್ಷಿಯು ಆ ರೀತಿ ಬರೆಸಿದ್ದೆನೆ ಎನ್ನುತ್ತಾರೆ. ನೀವು ಕೊಟ್ಟ ನಿಪಿ 1 ದೂರಿನಲ್ಲಿ ಬರೆಸಿದ್ದು ಒಬ್ಬನು ಮೋಟರ ಸೈಕಲನ್ನು ಕಿತ್ತಿಕೊಂಡನೆಂದು ಉಳಿದವರು ನಮ್ಮ ಕಡೆ ಇದ್ದ ಫೋನ, ಹಣ ಮತ್ತು ಆಭರಣಗಳನ್ನು ಕೊಡಿ ಎಂದು ಬರೆಸಿದ್ದು ನಿಜನಾ ಅಥವಾ ಅಲ್ಲಿದ್ದ 6 ಜನರು ನಮ್ಮಲ್ಲಿದ ವಸ್ತುಗಳಾದ ಮೊಬೈಲ ಫೋನ, ಹಣ ಮತ್ತು ಬಂಗಾರ ಚೈನ ಕೊಡಿ ಎಂದು ಕೇಳಿದರು ಎಂಬುದು ನಿಜ ಎಂದರೆ ಸಾಕ್ಷಿಯು 5 ಜನ ಕೇಳಿದ್ದು ನಿಜ ಎನ್ನುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿಯು ನಿಮ್ಮ ಪ್ಯಾಂಟಿನ ಕಿಸೆಯಲ್ಲಿದ್ದ ಮೊಬೈಲ ಫೋನನ್ನು ತೆಗೆಯುವಾಗ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ಅದು ಪ್ಯಾಂಟಿನ ಕಿಸೆ ಅಲ್ಲ ಅಂಗಿಯ ಕಿಸೆ ಆಗಬೇಕಾಗಿತ್ತು ಎನ್ನುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಪ್ಯಾಂಟಿನ ಕಿಸೆಯಿಂದ ಮೊಬೈಲ ಫೋನ ತೆಗೆದನೆಂದು ಹೇಳಿದ್ದೀರಿ ಆದರೆ ನಿಪಿ 1 ರಲ್ಲಿ ಅಂಗಿ ಕಿಸೆಯಿಂದ ಮೊಬೈಲ ಫೋನ ತೆಗೆದನೆಂದು ಹೇಳಿದ್ದೀರಿ ಇದರಲ್ಲಿ ಯಾವುದು ನಿಜ ಎಂದರೆ ಸಾಕ್ಷಿಯು 1 ನೇ ಆರೋಪಿಯು ನನ್ನ ಅಂಗಿಯ ಕಿಸೆಯಿಂದ ಮೊಬೈಲ ಫೋನನ್ನು ತೆಗೆದಿದ್ದು ನಿಜ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೀವು ನಿಮ್ಮ ಅಕ್ಕ ಸೌಮ್ಯಾಳ ಕೈಯಲ್ಲಿದ್ದ ಮೊಬೈಲ ಫೋನನ್ನು ಆರೋಪಿತರು

ಕಿತ್ತುಕೊಂಡರು ಎಂದು ಹೇಳಿದ್ದೀರಿ ನೀವು ನಿಮ್ಮ ನಿಪಿ 1 ದೂರಿನಲ್ಲಿ ಮತ್ತೊಬ್ಬನು ನನ್ನ ಅಕ್ಕ ಸೌಮ್ಯಳ ಕೈಯಲ್ಲಿದ್ದ ಅವಳ 6000/- ರೂಪಾಯಿ ಬೆಲೆಯ ರಿಯಲ್ ಮಿ ಮೊಬೈಲ ಹ್ಯಾಂಡ ಸೆಟ್ಟನ್ನು ಕಸಿದುಕೊಂಡನೆಂದು ಬರೆಸಿದ್ದೀರಿ ಎಂದರೆ ಸಾಕ್ಷಿಯು ಆ ರೀತಿ ಬರೆಸಿಲ್ಲ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೀವು ಮನೆಗೆ ಬಂದು ನನ್ನ ತಾಯಿಗೆ ಈ ಘಟನೆ ಬಗ್ಗೆ ತಿಳಿಸಿದೆನು ಆಗ ನನ್ನ ತಾಯಿ ನೋಡುವ ಈಗ ದೂರು ಕೊಡುವುದು ಬೇಡ ಎಂದು ಹೇಳಿದಳು ಎಂದು ಸಾಕ್ಷಿ ನುಡಿದಿದ್ದೀರಿ ಆದರೆ ನಿಪಿ 1 ದೂರಿನಲ್ಲಿ ಮುಂದೆ ನಾವು ಮನೆಗೆ ಹೋಗಿ ಮನೆಯಲ್ಲಿ ವಿಷಯ ತಿಳಿಸಿದೆವು ಅವರು ಕೇಸ ಕೊಡುವುದು ಬೇಡ ನೀನು ದಿನಾಲೂ ಅದೇ ರಸ್ತೆಯಲ್ಲಿ ಹೋಗಿ ಬಂದು ಮಾಡುತ್ತಿ ಅಂತಾ ಹೇಳಿದ್ದರಿಂದ ನಾನು ಸುಮ್ಮನಾಗಿದ್ದೆನು ಎಂದು ಬರೆಸಿದ್ದೀರಿ ಇದರಲ್ಲಿ ಯಾವುದು ನಿಜ ಎಂದರೆ ಸಾಕ್ಷಿಯು ನಿಪಿ 1 ರಲ್ಲಿ ನಮೂದಿಸಿದ ಮನೆಗೆ ಬಂದು ತಿಳಿಸಿದ್ದು ಎಂದರೆ ನನ್ನ ತಾಯಿಗೆ ತಿಳಿಸಿದ್ದು ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೀವು ಇದಾದ 3 ತಿಂಗಳಲ್ಲಿ ನನ್ನ ಮೊಬೈಲ ಕಸಿದುಕೊಂಡವರು ಸಿಕ್ಕಿದ್ದಾರೆ ಅವರನ್ನು ಕಿತ್ತೂರು ಪೊಲೀಸ ಠಾಣೆಯಲ್ಲಿ ಕರೆದುಕೊಂಡು ಬಂದಾರೆ ಎಂದು ನನಗೆ ಗೊತ್ತಾಯಿತು ಎಂದು ಸಾಕ್ಷ್ಯ ನುಡಿದಿದ್ದೀರಿ ನಿಮ್ಮ ನಿಪಿ 1 ದೂರಿನಲ್ಲಿ ಆದರೆ ಈಗ ಕಳೆದ ಮಾರ್ಚ ತಿಂಗಳಲ್ಲಿ ಎಂ.ಕೆ.ಹುಬ್ಬಳ್ಳಿ ಯಲ್ಲಿ ಒಬ್ಬನ ಮೊಬೈಲ ಕಸಿದುಕೊಂಡು ಹೋಗುತ್ತಿದ್ದ 3 ಜನರಿಗೆ ಕಿತ್ತೂರು ಠಾಣೆಯಲ್ಲಿ ಅರೆಸ್ಟ ಮಾಡಿದ ವಿಷಯ ಗೊತ್ತಾಯಿತು ಎಂದು ನೀವು ಬರೆಸಿದ್ದೀರಿ ಎಂದರೆ ಸಾಕ್ಷಿಯು ಬರೆಸಿದ್ದೆನೆ ಎನ್ನುತ್ತಾರೆ. ಈ ಎರಡರಲ್ಲಿ ಯಾವುದು ನಿಜ ಎಂದರೆ ಸಾಕ್ಷಿಯು ನಿಪಿ 1 ರಲ್ಲಿ ನಮೂದಿಸಿದ್ದು ನಿಜ

ಎನ್ನುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಆಗ ಮೋಟರ ಸೈಕಲನ್ನು ನಿಧಾನ ಮಾಡಿ ಮೋಟರ ಸೈಕಲನ್ನು ಯಾಕೆ ನಿಲ್ಲಿಸಿದ್ದೀರಿ ಎಂದು ಕೇಳಿದ್ದೆನೆಂದು ನಿಪಿ 1 ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ದೂರಿನಲ್ಲಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಅಲ್ಲಿ ಇದ್ದ 6 ಜನರು ನನಗೆ ನಿಮ್ಮಲ್ಲಿದ್ದ ವಸ್ತುಗಳಾದ ಮೊಬೈಲ ಫೋನ, ಹಣ ಮತ್ತು ಬಂಗಾರ ಚೈನ ಕೊಡಿ ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಆಗ ನಾನು ಮತ್ತು ನನ್ನ ಅಕ್ಕ ಚೆರಾಡಿದೆವು. ಆಗ ಬಿಡಿ ಕಡೆಯಿಂದ ಎರಡು ವಾಹನಗಳು ಬರುತ್ತಿದ್ದವು ಎಂದು ನಿಪಿ 1 ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಆ ರೀತಿ ಸ್ಥಳದಿಂದ ಓಡುತ್ತಿದ್ದಾಗ ಅಲ್ಲಿ ಬರುತ್ತಿದ್ದ ಎರಡು ಕಾರುಗಳನ್ನು ನಾವು ನಿಲ್ಲಿಸಲು ಸನ್ನೆ ನೀಡಿದರೂ ಅವರು ನಿಲ್ಲಿಸಲಿಲ್ಲ ಎಂದು ನಿಪಿ 1 ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆರೋಪಿತ ಒಬ್ಬನು ನನ್ನ ಮೋಟರ ಸೈಕಲನ ಕೀ ಯನ್ನು ಕಿತ್ತುಕೊಂಡಿದ್ದು ಅಲ್ಲೇ ಎಸೆದು ಹೋಗಿದ್ದನೆಂದು ನಿಪಿ 1 ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಈ ಘಟನೆ ಆದ ನಂತರ ನಮ್ಮ ಊರಿಗೆ ನಾನು ಮತ್ತು ಚಾಸಾ 8 ಯಾವ ರೀತಿ ಹೋದೆವೆಂದು ನಿಪಿ 1 ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ' ಮನೆಗೆ ಬಂದು ನನ್ನ ತಾಯಿಗೆ ಈ ಘಟನೆ ಬಗ್ಗೆ ತಿಳಿಸಿದೆನು. ಆಗ ನನ್ನ ತಾಯಿ ನೋಡುವ ಈಗ ದೂರು ಕೊಡುವುದು ಬೇಡ ಎಂದು ಹೇಳಿದಳು. ನಾನು ಪ್ರತಿದಿನವೂ ಈ ಘಟನೆಯಾದ ದಾರಿಯಲ್ಲೇ ಓಡಾಡುವುದರಿಂದ ನನ್ನ ತಾಯಿ ದೂರು ಕೊಡುವುದು ಬೇಡ

ಎಂದು ಹೇಳಿದ ಕಾರಣ ನಾನು ದೂರು ಕೊಡಲು ಸುಮ್ಮನಾದೇನು. ಇದಾದ ಸುಮಾರು 3 ತಿಂಗಳಲ್ಲಿ ನನ್ನ ಮೊಬೈಲ ಕಸೆದುಕೊಂಡವರು ಸಿಕ್ಕಿದಾರೆ ಅವರನ್ನು ಕಿತ್ತೂರು ಪೊಲೀಸ ಠಾಣೆಯಲ್ಲಿ ಕರೆದುಕೊಂಡು ಬಂದಾರೆ ಎಂದು ನನಗೆ ಗೋತ್ತಾಯಿತು ' ಎಂದು ನನ್ನ ದೂರು ನಿಪಿ 1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 19.02.2020 ರಂದು ನಾನು ಮತ್ತು ಚಾಸಾ 8 ಮೋಟರ ಸೈಕಲನಲ್ಲಿ ಎಂ.ಕೆ.ಹುಬ್ಬಳ್ಳಿಯಿಂದ ಬೈಲೂರಿಗೆ ಹೋಗುತ್ತಿದ್ದೆವೆ ಎಂದು ಕಿತ್ತೂರು ದಾಟಿ ಕಿತ್ತೂರು-ಬೀಡ-ಖಾನಪೂರ ರಸ್ತೆಯಲ್ಲಿ ಹೋಗುತ್ತಿರುವಾಗ ಹೀರೆಮಠ ಎಂಬುವವರ ಜಮೀನ ಹತ್ತಿರ ಈ ಘಟನೆ ಆಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ದೂರು ಕೊಟ್ಟ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿದರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಹಸೀಲ್ದಾರವರು ಆರೋಪಿತರ ಗುರುತಿನ ಕವಾಯತ ಮಾಡಿದರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಹಾಜರು ಮಾಡಿದ ನಾನು ಮುಖ್ಯವಿಚಾರಣೆಯಲ್ಲಿ ಗುರುತಿಸಿದ ಫೊಟೋಗಳನ್ನು ಈ ಕೇಸಿಗೆ ಅನುಕೂಲವಾಗುವಂತೆ ತೆಗೆದ ಫೊಟೋಗಳು ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಜಪ್ತಮಾಡಿದ ಎಂದು ಹೇಳುವ ಮೊಬೈಲ ಫೋನಗಳಿಗೂ ಚಿನ್ನದ ಚೈನು ಮತ್ತು ಬಟ್ಟೆಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿತರಿಗೆ ಸೇರಿದ ಮೋಟರ ಸೈಕಲನ್ನು ಸುಳ್ಳಾಗಿ ಅಳವಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಈ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧ

ಇಲ್ಲ ಎಂದರೆ ಸರಿಯಲ್ಲ. ಕಿತ್ತೂರು ಪೊಲೀಸ ಠಾಣೆಯಲ್ಲಿ ಕೆಲಸ ಮಾಡುವ ಪೊಲೀಸ ಪೇದೆ ನನ್ನ ಸ್ನೇಹಿತ, ಚೇತನ ಮತ್ತು ನನ್ನ ಸಂಬಂಧಿಕ ಎಎಸ್ಐಯಾದ ಗಿರಿಯಾಲ ಇವರ ಜೊತೆ ಶಾಮೀಲಾಗಿ ಆರೋಪಿತರ ವಿರುದ್ಧ ಈ ಸುಳ್ಳು ಕೇಸನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.